Reg. No. M. 1550. KODAGU 4-10-1935

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೆಚ್ಚಿನ ಮುದ್ರಣ ಕಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಅಕ್ಟೋಬರ್ ತಾರೀಕು ೪ನೇ ಶುಕ್ರವಾರ. [ಸಂಚಿಕೆ ೧೦

By Appointment.
To H. E. The Governor of Madras.

CUPS AND MEDALS.



Telephone; 3145

Telegrams: 'PRECIOUS.'

V. SUBRAMANIA IYER.
Jeweller, & Diamond Merchant,
52–46 2 & 3 Kuppumuthu Street Tiruvateswaranpet. MADRAS. POST BOX 423 TRIPLICANE.
Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906.] [Incorporated in British India.

Head office;—UDIPI (S. Kanara.)

It will pay you if you call at our offices at MERCARA OR VIRARAJENDRAPET.

(1) Fixed Deposits are now accepted up to 5%.
(2) Current accounts opened free of any charge and interest allowed up to 2%.
(3) Savings Bank accounts—Interest allowed at

3½%

Special facilities offered—(1) Withdrawals allowed by cheques.
(2) Production of pass books unnecessary at each withdrawal.
(3) Accounts transferred from one office to another free of any charges
(4) Cumulative Deposits—a speciality.

Advances granted on approved securities on easy terms.

All kinds of banking business transacted. For further particulars please apply to any of our offices.

Udipi. 29—7—1935. 52—47 M. Srinivasa Prabhu, Manager,

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.
ಉದಾರವಾದ ಕೈಟ್ಟ ಭೂಕಂಪ ಸೌಲಭ್ಯಗಳು.

(1) ಆರು ತಿಂಗಳುಗಳವರೆಗೆ ಪ್ರೀಮಿಯಂ ಇಲ್ಲದೆ ಪಾಲಸಿಗಳು ಜಾರಿಯಲ್ಲಿರುವವು.
(2) ಕ್ಲೇಮ್ಸುಗಳು ಮತ್ತು ಪಾವತಿಯು ಅತೀ ವಿನಯ ಮತ್ತು ಕ್ಷಿಪ್ರದಲ್ಲಾಗುವುದು.
(3) ಸಾಲಗಳಮೇಲಿನ ಬಡ್ಡಿಯ ದರವು 4½% ಗೆ ಇಳಿಸಲ್ಪಟ್ಟಿದೆ.
(4) ಪುನಃ ಜಾರಿಗೆ ತರುವ ಶರತ್ತುಗಳು ಸುಲಭ ರೀತಿಯಲ್ಲಿವೆ.

ಜಾರಿಯಲ್ಲಿರುವ ವಿಮೆಮೊಬಲಗು (ಹೆಚ್ಚು) 265 ಲಕ್ಷ
ಲೀವಾದೇವಿಯಲ್ಲಿರುವಮೊಬಲಗು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು) ರೂ. 16 ಲಕ್ಷ
ವಿವೂ ಹಕ್ಕುಗಳ ಪಾವತಿ ರೂ. 33 ಲಕ್ಷ

ಬೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ
ಜೀವಾವಧಿ ಪಾಲಿಸಿಗಳಿಗೆ ಸಾಲಿಯೂನರೂ. 25%o
ಎಂಡೋಮೆಂಟ್ ಪಾಲ್ಸಿಗಳಿಗೆ ಸಾಲಿಯೂನ ರೂ. 20%o

ಏಜೆನ್ಸಿಯು ವಿಯಮಗಳು ವಿಶೇಷ ಲಾಭದಾಯಕ.
ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ:—
ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ. ಎನ್ ಎಸ್ ಅಯ್ಯಂಗಾರ್
ಸೂಪರಿಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡು.
52—18 ಬೆಂಗಳೂರು ಸಿಟಿ.

ವಿವಿಧ ವಾರ್ತಾವಳಿ.

ಕ್ವೆಟ್ಟಾದಲ್ಲಿ ಮತ್ತೂ ಕಂಪನಗಳು.

ಕಳೆದ ತಾ. 29 ರಲ್ಲಿ ರಾತ್ರೆ ಕ್ವೆಟ್ಟಾದಲ್ಲಿ ಎರಡು ಬಾರಿ ಭೂಕಂಪನಗಳುಂಟಾದುವು. ಕಂಪನಗಳಿಗೆ ಸ್ವಲ್ಪ ಮುಂಚಿತವಾಗಿ ನೆಲದೊಳಗೆ ಭಯಂಕರ ಗುಡುಗು ಶಬ್ದಗಳು ಕೇಳಿಬಂತು. ತತ್ಕಾಲಿಕ ಜಿಂಕು ಶೀಟ್‌ಗಳಿಂದ ಕಟ್ಟಿದ ಶೆಡ್ಡಾಗಳ ಅಲುಗೋಣದಿಂದ ದೊಡ್ಡ ಶಬ್ದವು ಉಂಟಾಯಿತು. ಆದರೆ ನೆಲಸಮವಾಗಬಹುದಾದ ಕಟ್ಟಡಗಳಿಲ್ಲದಿರುವದರಿಂದಲೋ ಏನೋ ಹೆಚ್ಚಿನೇನೂ ಸಂಭವಿಸಿರುವದಿಲ್ಲ.

—೦೦೦—

ಆಯುಷ್ಕರ್ಮಕಲಾ ಶಿಕ್ಷಣಕ್ಕೊಂದು ಕಾಲೇಜು!

ಕರಾಚಿಯಲ್ಲಿ ಆಯುಷ್ಕರ್ಮ ನವೀನ ವಿಧಾನಗಳನ್ನು ಈಗಿನ ಸಂಪ್ರದಾಯಕ್ಕನುಗುಣವಾಗಿ ಕಲಿಸುವ ಒಂದು ಕಾಲೇಜು ತೆರೆಯಲ್ಪಡಲಿಕ್ಕಿದೆ. ಇಲ್ಲಿ ಲಂಡನ್, ಪ್ಯಾರಿಸ್ ನಗರಗಳಲ್ಲಿನ ಹೇರ್ ಕಟ್ಟಿಂಗ್ ಸೆಲೂನುಗಳಲ್ಲಿ ಮಾಡುವ ಪ್ರಕಾರದ ನೂತನ ಆಯುಷ್ಕರ್ಮ ಸೂತ್ರಗಳನ್ನು ಕಲಿಸುವರು. ಇಲ್ಲಿ ತರಬೇತಾದವರಿಗೆ ಯುಕ್ತ ಉದ್ಯೋಗಗಳನ್ನು ಸಹ ಈ ಕಾಲೇಜಿನವರೇ ದೊರಕಿಸಿ ಕೊಡುವರಂತೆ.

—೦೦೦—

ಗಡಿ ಪ್ರಾಂತ್ಯದ ಗಡಿಬಿಡಿ ಕೊಂಚ ಸಮೂಧಾನಿಸಿದೆ.

ವಾಯವ್ಯ ಗಡಿ ಪ್ರಾಂತ್ಯದ ಮೊಹಮಂಡ್ ಗಲಾಟೆಯು ಕೊಂಚ ಸಮೂಧಾನವಾಗಿದೆ. ಇಂಡಿಯಾ ಸರ್ಕಾರದ ಸೈನ್ಯಗಳು ಅಲ್ಲಲ್ಲಿ ಇರಿಸಲ್ಪಟ್ಟಿವೆ. ಅನೇಕ ಪಂಗಡಗಳು ಶಾಂತಿಯನ್ನಪೇಕ್ಷಿಸಿ ರಾಜಿಯಾಗಿರುವವು. ವಿಮಾನಗಳು ಆಕಾಶದಲ್ಲಿ ಹಾರಾಡುತ್ತ ಎಡೆಬಿಡದೆ ಕಾವಲಿರುವವು ಅಲಿಂಗರ್ ಫಕೀರ್ ಎಂಬ ಮುಖಂಡನು ಮಾತ್ರ ದಳಗಳನ್ನೆರ್ಪಡಿಸುವ ಪ್ರಯತ್ನದಲ್ಲಿರುವನಂತೆ. ಆದರೆ ಅವನಿಗೆ ದಳಗಳನ್ನೆರ್ಪಡಿಸಿ ದಂಗೆಯೆಬ್ಬಿಸಲು ಸಾಧ್ಯವಿಲ್ಲದಾಗಿದೆ ಎಂದು ತಿಳಿಯಬಂದಿರುತ್ತೆ.

—೦೦೦—

ಅ. ಭಾ. ಕಾಂಗ್ರೆಸ್ ಕಮಿಟಿ ಮೀಟಿಂಗು.

ಮದ್ರಾಸಿನಲ್ಲಿ ಅಕ್ಟೋಬರ್ ತಾರೀಕು 14 15, 16ರಲ್ಲಿ ಅಖಿಲ ಭಾರತ ರಾಷ್ಟ್ರ ಸಭೆಯ ವರ್ಕಿಂಗ್ ಕಮಿಟಿಯ ಸಭೆ ಕೂಡುವದು. ಆ ಸಮಯಕ್ಕೆ ಬರುವ ಸಭಾಸದರೆಲ್ಲರೂ ಶ್ರೀಯುತ ನಾಗೇಶ್ವರರಾವ್ ಪಂತಲುರವರು ಆತಿಥ್ಯದಲ್ಲಿರುವರು. ಅಲ್ಲದೆ ಸಭೆಯು ಕೂಡ ಅವರ ಭವನದಲ್ಲೇ ಸೇರುವದು. ಇದಾದ ಮೇಲೆ ತಾ. 17 ಮತ್ತು 18ರಲ್ಲಿ ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯು ಜರಗುವದು. ಇದಕ್ಕಾಗಬೇಕಾದ ಪ್ರಬಂಧಗಳೆಲ್ಲವೂ ಉತ್ಸಾಹದಿಂದ ಜರುಗುತ್ತಲಿದೆ.

—೦೦೦—

ಇದೆಂಥ ಸೃಷ್ಟಿ ವೈಚಿತ್ರ್ಯ!

ಲಗ್ನವಾದನಂತರ ಹುಡುಗಿಯು ಹುಡುಗನಾದನು.

ಕಾಫೆವಾಡದ ಪಶ್ಚಿಮ ಭಾಗದಲ್ಲಿರುವ ಜೂನಗಢ್ ಎಂಬಲ್ಲಿ ಒಬ್ಬ ಹುಡಗಿಯನ್ನು ಅವಳ 12ನೇ ವಯ್ಯದಲ್ಲಿ (6 ವರ್ಷಕ್ಕೆ ಹಿಂದೆ) ಓರ್ವನಿಗೆ ವಿವಾಹ ಮಾಡಿದ್ದರು. ಈಚೆಗೆ ಕ್ರಮಶಃ ಅವಳ ಸ್ತ್ರೀ ಲಕ್ಷಣಗಳು ಮರೆಯಾಗುತ್ತ ಪುರುಷ ಚಿನ್ಹೆಗಳು ಕಾಣಬರುತ್ತಲಿರುವುದನ್ನು ಕಂಡು ಆಕೆಯ ಗಂಡನು ಗಾಬರಿಪಟ್ಟು ಅವಳನ್ನು ಅವಳ ತಂದೆಯ ಮನೆಗೆ ಕಳುಹಿಸಿಬಿಟ್ಟನು. ಅವಳ ತಂದೆಗೆ ಪುತ್ರ ಸಂತಾನವಿಲ್ಲದ್ದರಿಂದ ಈಗ ಹುಡುಗನಾಗುತ್ತ ಮೂರ್ಪಡುತ್ತಲಿರುವ ತನ್ನ ಹುಡುಗಿಯನ್ನೇ ಆತನ ಆಸ್ತಿಗಳ ಉತ್ತರಾಧಿಕಾರಿಯೂಗಿರಿಸಲು ನಿರ್ಧರಿಸಿರುವನು.

—೦೦೦—

ವಿಜ್ಞಾನದ ಭಯಾನಕ ಶೋಧೆ.
'X ರೇ' ಯಲ್ಲ ಇದು 'Z ರೇ'
'ಮರಣದ ಕಿರಣ'

ಇಂಗ್ಲೆಂಡಿನಲ್ಲಿ ಒಬ್ಬ ವೈಜ್ಞಾನಿಕರು ತಮ್ಮ ಅವಿಶ್ರಾಂತ ಶೋಧೆಯಿಂದ ಒಂದು ಕಿರಣವನ್ನು ಕಂಡು ಹಿಡಿದಿರುವರು. ಆ ಕಿರಣಗಳು ಯಾರ ಮೇಲೆ ಬೀಳುವವೋ ಅವರು ತಕ್ಷಣ ಮೃತರಾಗುವರು. ಈ ಅತ್ಯಂತ ಶಕ್ತಿಯುಳ್ಳ ಮತ್ತು ಭಯಾನಕ ಕಿರಣವನ್ನು ಬ್ರಿಟಿಷ್ ಮಂತ್ರಿ ಮಂಡಲಕ್ಕೂ ತೋರಿಸಿರುವರಂತೆ. ಇದಕ್ಕೆ 'Z ರೇ' ಎಂದು ಹೆಸರು. ವಿಜ್ಞಾನ ಶಾಸ್ತ್ರವು ಯುದ್ಧವನ್ನು ಎಷ್ಟೋ ಭೀಕರವಾಗಿ ಮಾಡಿದ ಇನ್ನು ಈ ವಂ ಪ್ರಸಾದದಿಂದ ಹೇಳಬೇಕೆ! ವಿಜ್ಞಾನವು ಕೂಲ್ಲು ಕೊಲೆಗಳಿಗಾಗಿ ಉಪಯೋಗಿಸಲ್ಪಡುವುದಾದರೆ ಪ್ರಪಂಚದ ಶಾಂತಿ ದೇವತೆಯ ಅವಸ್ಥೆಯೇನು?

—೦೦೦—

ಕಮಲಾನೆಹರುರವರೂ ಸ್ವಲ್ಪ ಸ್ವಾಸ್ಥ್ಯ ಹೊಂದುತ್ತಲಿರುವರು.

ಪಂಡಿತರು ಹೊಸ ಪುಸ್ತಕ ಬರೆಯುತ್ತಲಿರುವರು.

ಶ್ರೀ. ಕಮಲಾನೆಹರೂರವರ ದೇಹಸ್ಥಿತಿಯು ಕೊಂಚ ಸುಧಾರಿಸಿದೆ. ಜ್ವರವು ಕೊಂಚ ಕೊಂಚವಾಗಿ ಇಳಿಯುತ್ತಲಿದೆ. ಆಹಾರಗಳ ಸೇವನೆಯು ಸ್ವಲ್ಪ ಅಧಿಕ ಪ್ರಮಾಣದಿಂದಾಗುತ್ತಲಿದೆ. ಮೊನ್ನೆಯೂಗಿ ಒಂದು ಶಸ್ತ್ರಕ್ರಿಯೆ ನಡೆಸಿದುದರ ಫಲವಾಗಿ ಜ್ವರವು ಇಳಿದಿದ್ದು ಈಗ ಪುನಃ ಏರಿದಾದರೂ ಒಟ್ಟಿನಲ್ಲಿ ದೇಹಸ್ಥಿತಿಯು ಸುಧಾರಿಸಿದೆಂದು ಅಲ್ಲಿನ ವರ್ತಮಾನ.

ಪತ್ನಿಯ ಉಪಚಾರದಿಂದ ದೊರೆತ ಅಲ್ಪ ಸಮಯಗಳನ್ನು ತಮ್ಮ ಒಂದು ಗ್ರಂಥದ ಪರಿಶೋಧನೆಯಲ್ಲಿ ಪಂಡಿತಜಿ ವ್ಯಾಪರಿಲಾಲರು ಕಳೆಯುತ್ತಿರುವರು. ಹೆಚ್ಚಾದಿ ತಮ್ಮ ಜೀವ ಚರಿತ್ರೆಯನ್ನೂ, ಆದರೊಡನೆ ಸಂಭವಿಸಿದ ಕೆಲವು ಸಂಭವಗಳನ್ನೂ ಒಳಗೊಂಡ ಈ ಪುಸ್ತಕವನ್ನು ಲಂಡನಿನ ಒಂದು ಮುಖ್ಯ ಪ್ರಕಟಣಾಲಯದವರು ಛಾಪಿಸಿ ಪ್ರಕಟಿಸಲಿರುವರು.

—೦೦೦—

ಲಾಹೋರಿನ ಷಾಹಿದ್‌ಗಂಜ್ ದುರಂತ ಪ್ರಕರಣಕ್ಕೆ ಅಂತ್ಯವಿಲ್ಲದಾಗಿದೆ.

ಲಾಹೋರಿನಲ್ಲಿ ತಲೆಯೆತ್ತಿರುವ ಸಿಖ್ಖ್—ಮುಸ್ಲಿಮ್ ವಿವಾದಕ್ಕೆ ಅಂತ್ಯವೇ ಇಲ್ಲ! ಸರ್ಕಾರದವರು ವ್ಯವಸ್ಥೆ ನಡೆಸಿದರೂ ಮನಸ್ಥಾಪವು ಒಂದಲ್ಲ ಇನ್ನೊಂದು ರೂಪದಲ್ಲಿ ಉಪಸ್ಥಿತವಾಗುತ್ತಲಿದೆ. ಇಷ್ಟರ ವರೆಗೆ ಹರತಾಳ ನಿಷೇಧ ಸಭೆ, ಮೆರವಣಿಗೆ, ಸತ್ಯಾಗ್ರಹ, ದೊಂಬಿ ಮುಂತಾದ ಕಾರ್ಯಕ್ರಮಗಳಿಂದ ಕಲಹವು ವ್ಯಕ್ತಗೊಂಡಿತ್ತು. ಈಗ ಇತ್ತಂಡದವರೂ ಪರಸ್ಪರ ಬಹಿಷ್ಕಾರದಿಂದ ತಮ್ಮ ಮನಸ್ಥಾಪವನ್ನು ಹೊರಗೆಡಹುತ್ತಲಿರುವರು. ಯಾವ ಮುಸಲ್ಮಾನನೂ ಹಿಂದುಗಳಿಗೇನೊಂದೂ ವಿಕ್ರಯಿಸಬಾರದೆಂದು ಮುಹಮ್ಮದೀಯರ ಸಂಕಲ್ಪ. ಮುಸಲ್ಮಾನರಿಗೊಬ್ಬರಿಗೂ ಏನೊಂದೂ ಸಾಮಾನು ಕೊಡಬಾರದೆಂದು ಹಿಂದುಗಳ ತೀರ್ಮಾನ. ಇದರಿಂದ ವ್ಯಾಪಾರ ತೀರ ಮಂದವಾಗಿ ಸಹಸ್ರಾರು ರೂಪಾಯಿಗಳ ನಷ್ಟವು ಪ್ರತಿ ದಿನವೂ ಆಗುತ್ತಲಿದೆಯಂತೆ.

—೦೦೦—

ಸನಾತನಿಗಳು ಹರಿಜನ ಕೀರ್ತನಕಾರರ ಕಾಲಿಗೆ ಮಣಿದರು.

ರತ್ನಗಿರಿಯ ಹರಿಜನ ಮುಖಂಡರೂ, ಪ್ರಖ್ಯಾತ ಗಾಯಕರೂ ಆದ ಶ್ರೀ. ಎಸ್. ಎನ್ ಕಜ್ರೋಲ್ಕರರೆಂಬವರನ್ನು ರತ್ನಗಿರಿಯ ಪತೀತಪಾವನ ದೇವಸ್ಥಾನದಲ್ಲಿ ಹರಿಕೀರ್ತನೆ ನಡೆಸಬೇಕೆಂದು ಹಲವು ಮಂದಿ ಆಮಂತ್ರಿಸಿದರು. ಕಜ್ರೋಲ್ಕರರು ಕೀರ್ತನೆ ನಡೆಸಲು ಬಹಳ ಸಂದೇಹಗೊಂಡರು. ಆ ಮೇಲೆ ಒಪ್ಪಿ ಕೀರ್ತನೆ ನಡಿಸಿದರು. ಕೀರ್ತನೆಗೆ ಎಲ್ಲಾ ಜಾತಿ ಮತಗಳವರೂ ಬಂದಿದ್ದರು. ಕೀರ್ತನೆ ಮುಗಿದನಂತರ ಜನರೆಲ್ಲಾ ಮೆಚ್ಚಿ, ಶ್ರೀ ಕಜ್ರೋಲ್ಕರರು ನಡಿಸುವ ಹರಿಜನ ಕಾರ್ಯಕ್ಕಾಗಿ ಉಪಯೋಗಿಸಲು ಹಲವು ಪಾರಿತೋಷಗಳನ್ನಿತ್ತರು. ಕೀರ್ತನಕಾರರು ತಮ್ಮ ಚಾತುರ್ಯದಿಂದುಂಟು ಮಾಡಿದ ಗಾಢ ಭಕ್ತಿಪರ ವಾತಾವರಣದ ಸೆಳೆತಕ್ಕೆ ಸಿಕ್ಕಿ ನೆರೆದ ವರೆಲ್ಲಾ ಕೀರ್ತನಕಾರರ ಕಾಲು ಮುಟ್ಟಿ ನಮಸ್ಕರಿಸಿದರು. ಕೀರ್ತನೆ ನಡೆಯುತ್ತಿದ್ದಾಗ ದೂರದಲ್ಲೇ ನಿಂತುಕೊಂಡು ನೋಡುತ್ತಿದ್ದ ಬ್ರಾಹ್ಮಣ ಪಂಡಿತರೂ ಶ್ರೀ ಕಜ್ರೋಲ್ಕರರ ಕಾಲು ಮುಟ್ಟಿ ನಮಸ್ಕರಿಸಿದರು.

—೦೦೦—

ಇಟಲಿ – ಅಬಿಸೀನಿಯಾ.

ಅಬಿಸೀನಿಯೂ ಚಕ್ರವರ್ತಿಯವರ ಸೂಚನೆ.

ರಾಷ್ಟ್ರ ಸಂಘದವರು ಅಬಿಸೀನಿಯೂದವರ ರಕ್ಷಣೆಯ ಬಗ್ಗೆ ಏನೊಂದೂ ವ್ಯವಸ್ಥೆಯನ್ನು ಮಾಡದೆ, ಯಥೇಚ್ಛವಾಗಿ ಸೈನಿಕರನ್ನು ಅಬಿಸೀನಿಯೂದ ಕಡೆ ಕಳುಹಿಸುವ ಇಟಲಿಗೆ ಯಾವ ನಿರ್ಬಂಧವನ್ನೂ ಹಾಕದೆಯೂ, ನಿರ್ಲಕ್ಷ್ಯದಿಂದಿರುವದರಿಂದ ಅಬಿಸೀನಿಯೂ ಚಕ್ರವರ್ತಿಯರು, ಸಾರ್ವತ್ರಿಕ ಸೈನ್ಯ ಜುನಾವಣೆಯನ್ನು ಕೈಕೊಳ್ಳಬೇಕಾಗುವದೆಂದು ರಾಷ್ಟ್ರ ಸಂಘದ ಅಧ್ಯಕ್ಷರಿಗೂ ಕಾರ್ಯದರ್ಶಿಗಳಿಗೂ ತಿಳಿಸಿರುವರು,

ಅಕ್ಟೋಬರ್ ತಾ. 10 ರೊಳಗೆ ಯುದ್ಧ.

ಇಟಲಿಯ ಯುದ್ಧಸನ್ನಾಹಗಳನ್ನೂ, ರಾಷ್ಟ್ರ ಸಂಘದ ನಿರ್ಲಕ್ಷ್ಯಭಾವವನ್ನೂ ನೋಡುವಲ್ಲಿ ಯುದ್ಧವು ಶೀಘ್ರದಲ್ಲಿ ಪ್ರಾರಂಭವಾಗುವದೆಂದು ಅನೇಕರ ಮತ. ಆದರೆ ಅನೇಕ ಅಬಿಸೀನಿಯೂದವರು, ಯುದ್ಧವು ಅಕ್ಟೋಬರ್ 10 ರೊಳಗೆ ಪ್ರಾರಂಭವಾಗುವದೆಂದು ಹೇಳುತ್ತಲಿರುವರು.

ಅಬಿಸೀನಿಯೂದ ಎಲ್ಲೆಕಟ್ಟುಗಳಲ್ಲಿ.

ಅಬಿಸೀನಿಯೂದ ಎಲ್ಲೆಕಟ್ಟುಗಳಲ್ಲಿ ಇಟಲಿಯವರು ಅಪಾರ ಸೈನ್ಯ ಕಂಸ್ಟ್ರಕ್ಷಣ ಮಾಡಿರುವದರಿಂದ ಅಲ್ಲಿರುವ ಅಬಿಸೀನಿಯೂದ ಸೈನಿಕರಿಗೂ ಇಟಲಿ ಸೈನಿಕರಿಗೂ ಈ ಕಾಲದಲ್ಲಿ ಬಹುದೆಂಬ ವಿಚಾರದಿಂದಲೂ ಮತ್ತು ಇಟಲಿಯವರು ಬೇಕಾದು ಕಾಲ್ಗೆರೆಯುವರೆಂಬ ಶಂಕೆಯಿಂದಲೂ ಅಬಿಸೀನಿಯೂ ಸೈನ್ಯಗಳು ತಮ್ಮ ಈಗಿನ ಠಾಣ್ಯಾಧಿಂದ 18 ಮೈಲು ಹಿಂದಕ್ಕೆ ಸರಿಯಬೇಕೆಂದು ಅಬಿಸೀನಿಯೂ ಚಕ್ರವರ್ತಿಗಳು ಆಜ್ಞೆಯಿತ್ತಿರುವರು. ಅಲ್ಲದೆ ಎಲ್ಲೆಕಟ್ಟುಗಳಲ್ಲಿ ಅಬಿಸೀನಿಯೂ ಸೈನಿಕರು ಧಾಳಿಗೈದರೆಂದು ಇಟಲಿಯು ನೆಪ ತೆಗೆದು ಯುದ್ಧ ಪ್ರಾರಂಭ ಮಾಡದಂತೆ ಆ ಎಲ್ಲೆಕಟ್ಟುಗಳಲ್ಲಿ ನಡೆಯುವ ಆಚಾರಗಳನ್ನು ಪರೀಕ್ಷಿಸುತ್ತಿರಲಿಕ್ಕಾಗಿ ಒಂದು ಸಮಿತಿಯನ್ನು ರಾಷ್ಟ್ರ ಸಂಘದವರು ಕಳುಹಿಸಿಕೊಡಬೇಕೆಂದು ಅಬಿಸೀನಿಯೂ ಚಕ್ರವರ್ತಿಗಳು ರಾಷ್ಟ್ರ ಸಂಘಕ್ಕೆ ಬಿನ್ನೈಸಿಕೊಂಡಿರುವರು.

ಗೊಂಡರ್ ಹಾದಿಯನ್ನು ಮುಚ್ಚಿದರು.

ಅಬಿಸೀನಿಯೂದಿಂದ ಇಟಲಿಯ ಎರಿಟ್ರಿಯ ಪ್ರಾಂತ್ಯಕ್ಕೆ ಹೋಗುವ 'ಗೊಂಡರ್ ಪಾಸ್' ಎಂಬ ಕಣಿವೆ ಹಾದಿಯು ಮುಖಾಂತರ ಎರಿಟ್ರಿಯಾಕ್ಕೆ ಯಾರೂ ವ್ಯಾಪಾರ ಸಾಮಗ್ರಿಗಳನ್ನು ಸಾಗಿಸಕೂಡದೆಂದು ಅಬಿಸೀನಿಯ ಸರ್ಕಾರದವರು ಪ್ರಕಟಿಸಿ ಆ ಹಾದಿಯನ್ನು ಮುಚ್ಚಿರುವರು.

'ಅಮೇರಿಕದ ಪ್ರೆಸಿಡೆಂಟರ ಪ್ರಕಟಣೆ.

ಯುದ್ಧವು ಸಂಭವಿಸಿದ್ದಲ್ಲಿ ಕೋವಿ ನುದ್ದು ಮುಂತಾದ ಯುದ್ಧ ಸಾಮಗ್ರಿಗಳನ್ನೂ, ಯುದ್ಧದ ಸಮಯದಲ್ಲಿ ಬೇಕಾಗಬಹುದಾದ ಕಚ್ಚಾ ವಸ್ತುಗಳನ್ನೂ, ಹಡಗು ವಿಮಾನ ಮೊದಲಾದುವುಗಳನ್ನೂ ಯುದ್ಧವಾಗುತ್ತಲಿರುವ ಪ್ರದೇಶಗಳಿಗೆ ರವ್ಪು ಮಾಡಲಾಗುವುದಿಲ್ಲವೆಂದು ಅಮೇರಿಕದ ಪ್ರೆಸಿಡೆಂಟರು ಪ್ರಕಟಿಸಿರುವರು.

ಸುಯೇಜಿಗಾಗಿ ಹಡಗುಗಳು ಹೋಗುವದು ಬೇಡ.

ಯುದ್ಧ ಸಂಭವದ ಭಯದಿಂದ ಪ್ರಿನ್ಸ್ ಅಂಡ್ ಸಿಲ್ವರ್ ಶಿಪ್ಪಿಂಗ್ ಕಂಪೆನಿಯವರು ಮಲೆಯಾದಿಂದ ಯೂರೋಪಿಗೆ ವ್ಯಾಪಾರ ಸಾಗಿಸುವ ತಮ್ಮ ಹಡಗುಗಳಿಗೆ ಇನ್ನು ಸುಯೇಜ್ ಕಾಲುವೆಗಾಗಿ ಪ್ರಯಾಣ ಮಾಡದೆ ಕೇಪ್ ಆಫ್ ಗುಡ್‌ಹೋಪ್‌ಗಾಗಿ ಪ್ರಯಾಣ ಮಾಡಬೇಕೆಂದು ಆಜ್ಞಾಪಿಸಿರುವರು.

ಮೂವತ್ತು ಸಾವಿರ ಸೈನಿಕರು ಒಂದೇವಾರದಲ್ಲಿ.

ಇಟಲಿಯಿಂದ ಈ ವಾರದಲ್ಲಿ 30 ಸಾವಿರ ಸೈನಿಕರನ್ನು ಅಬಿಸೀನಿಯೂದ ಕಡೆ ಕಳುಹಿಸಲಾಗಿದೆ. ಇಂದಿನ ವರೆಗೆ ಒಂದೇ ವಾರದಲ್ಲಿ ಇಷ್ಟು ಸೈನಿಕರನ್ನು ಕಳುಹಿಸಿರಲಿಲ್ಲ. 5 ದೊಡ್ಡ ಯುದ್ಧ ನಾವೆಗಳನ್ನೂ ಕಳುಹಿಸಿರುವರು.

ಇಟಲಿಯ ಪ್ರಕಟಣೆ.

ಸೆಪ್ಟೆಂಬರ್ ತಾ 28ರಲ್ಲಿ ಇಟಲಿಯ ಮಂತ್ರಿಮಂಡಳಿಯವರು ಹೊರಡಿಸಿದ ಪ್ರಕಟಣೆಯಲ್ಲಿ ಹೀಗಿದೆ—'ಇಂದಿನ ವರೆಗೆ ರಾಷ್ಟ್ರ ಸಂಘವು ಇಟಲಿಯ ಹಿತವನ್ನು ಮುರಿಯುವ ಏರ್ಪಾಡುಗಳ ಜವಾಬ್ದಾರಿಕೆಯನ್ನು ವಹಿಸುವುದಿಲ್ಲವೋ ಅಂದಿನ ವರೆಗೆ ಇಟಲಿಯು ರಾಷ್ಟ್ರ ಸಂಘವನ್ನು ತ್ಯಜಿಸುವ ಇರಾದೆಯಲ್ಲಿಲ್ಲ. ಇಂಗ್ಲೆಂಡಿನ ಪರ ರಾಷ್ಟ್ರ ಸಚಿವರಾದ ಸರ್ ಸಾಮುವೇಲ್ ಹೋರ್‌ರವರ ಪತ್ರದ ವಿಷಯ ಇಟಲಿಗೆ ಬ್ರಿಟಿಷರ ಹಿತಕ್ಕೆ ಭಂಗವನ್ನುಂಟುಮಾಡಬೇಕೆಂಬ ಯಾವ ಉದ್ದೇಶವೂ ಇಲ್ಲ. ಇಟಲಿ—ಅಬಿಸೀನಿಯೂದ ಮನಸ್ಥಾಪಗಳನ್ನು ಆಫ್ರಿಕದಲ್ಲೆಲ್ಲ ವ್ಯಾಪಿಸುವಂತೆ ಮಾಡುವದೇ ಇಲ್ಲವೆಂದು ಇಟಲಿಯು ಬ್ರಿಟನಿಗೆ ಭರವಸೆ ಕೊಡುತ್ತದೆ. ಅಬಿಸೀನಿಯೂ ಚಕ್ರವರ್ತಿಗಳ ಹೇಳಿಕೆಗಳಲ್ಲೂ, ದೂರುಗಳಲ್ಲೂ ಇಟಲಿಗೆ ವಿಶ್ವಾಸವಿಲ್ಲ. ತಮ್ಮ ಸೈನಿಕರನ್ನು ಎಲ್ಲೆಕಟ್ಟುಗಳಿಂದ ಹಿಂಬಿಗಿಸಿದರೂ ಅವರು ಒಳಗೊಳಗೆ ಯುದ್ಧ ಸನ್ನಾಹಗಳನ್ನು ತ್ವರೆಯಲ್ಲಿ ನಡೆಸುತ್ತಲಿರುವರು. ಇಟಲಿಯ ಹಕ್ಕುಗಳು, ರಾಷ್ಟ್ರ ಸಂಘದಲ್ಲಿ ಪ್ರಾರಂಭದಿಂದಲೇ ನಿರ್ಲಕ್ಷಿಸಲ್ಪಟ್ಟಿರುವದರಿಂದ ಈಗ ಮನಸ್ಥಾಪಗಳು ಹದ ಮೀರಿವೆ

ಹದಿಮೂರು ಮಂದಿಯ ಮತ್ತೊಂದು ಕಮಿಟಿ.

ಹೊಸ ರಾಜಿ ಪ್ರಸ್ತಾಪಗಳನ್ನು ಏರ್ಪಡಿಸಲಿಕ್ಕೆ ಮತ್ತೊಂದು ಕಮಿಟಿಯು ನೇಮಕವಾಗಿದೆ. ಇದರಲ್ಲಿ 13 ಮೂರು ಮಂದಿ ನಿಯಮಿತರಾಗಿರುವರು. ಇವರು ಪುನಃ ಈ ಮನಸ್ತಾಪಗಳ ಆದಿಯನ್ನು ಪರೀಕ್ಷಿಸುವರಂತೆ. ಕಳೆದ ತಾ. 29 ರಲ್ಲೂ ಮತ್ತೆ 30 ರಲ್ಲೂ ಇವರ ಪಂಚಾಯಿತಿಗಳು ನಡೆದವು. ತೀರ್ಮಾನಗಳೇನೂ ಹೊಂಬಿದ್ದಿಲ್ಲ. ಕಾಲ ಏಳಂಬನವಾಗಬಾರದೆಂದು ಹಲವರ ಸೂಚನೆ.

ಸುಯೇಜು ಕಾಲುವೆಯನ್ನು ಮುಚ್ಚಲಿಪ್ಪಡುವುದಿಲ್ಲ.

ಸುಯೇಜು ಕಾಲುವೆಯ ಅಡಳಿತವು ಒಂದು ಕಂಪೆನಿಯ ಸ್ವಾಧೀನದಲ್ಲಿದೆ. ಅಕ್ಟೋಬರ್ ತಾ. 16ರಲ್ಲಿ ಅದರ ಡೈರೆಕ್ಟರುಗಳ ಮೀಟಿಂಗು ಕೂಡುವದು. ಆ ಸಭೆಯ ಕಾರ್ಯಕ್ರಮದಲ್ಲಿ ಕಾಲುವೆಯನ್ನು ಮುಚ್ಚುವ ವಿಷಯದ ವಿಚಾರವೇ ಇಲ್ಲವೆಂದು ತಿಳಿಯಬಂದಿದೆ. 1888ನೇ ಒಪ್ಪಂದದ ಪ್ರಕಾರ ಕಾಲುವೆಯು ಸದಾ ತೆರೆಯಲ್ಪಡುವನೆಂದು ಪ್ರಕಟವಾಗಿದೆ.

ಯುವಕರಿಗೆ ಹೊಸ ಹಾದಿ.

(ಲೇಖಕರು—ಪಂಡಿತ ತಾರಾನಾಥರು, ತುಂಗಭದ್ರಾ.)

ನ್ಯೂಯಾರ್ಕಿನಲ್ಲಿ ಕ್ರೈಸ್ತ ಮತ ಪ್ರಚಾರಕ್ಕಾಗಿ ಯುವಕರಿಗೆ ತರಬೇತು ಕೊಡುವ ಕಾಲೇಜ್ ಇದೆ. ಅಲ್ಲಿ ಕ್ರೈಸ್ತ ಮತ ಸಂಬಂಧವಾದ ಅನೇಕ ವಿಚಾರಗಳು ಯುವಕ ಯುವತಿಯವರಿಗೆ ಕಲಿಸಲ್ಪಡುತ್ತವೆ. ಜಗತ್ತಿನಲ್ಲಿಯ ಇತರ ಮತಗಳ ಮೂಢತೆಯನ್ನು ಅವರಿಗೆ ಸಾಕಷ್ಟು ಕೊಡಲಾಗುತ್ತವೆ. ಆದರೆ ಕಾಲೇಜಿನ ಉದ್ದೇಶವು ಕ್ರೈಸ್ತ ಮತ ಪ್ರಚಾರವೇ!

ಸ್ವಾತಂತ್ರ್ಯದ ಗಾಳಿಯು ಮನುಷ್ಯನ ಜೀವಿತದ ಸಕಲ ಭೂಮಿಕೆಗಳಲ್ಲಿಯೂ ಜೋರಾಗಿ ಬೀಸುತ್ತಿರುವ ಕಾಲದಲ್ಲಿ ವಿಚಾರಗಳು ಎಷ್ಟು ಪ್ರಾಚೀನವೇ ತನ್ನ ಆಗಲಿ ಯೋಗ್ಯತೆಯನ್ನು ನ್ಯಾಯಬುದ್ಧಿಗೆ ತೋರಿಸಿ ಕೊಡದೆ ಅವು ಬದುಕುವುದು ಕಷ್ಟ. ಹಿರಿಯರು ಹೇಳಿದ ಮಾತಿದು ಎಂದು ಯಾರಾದರೂ ಭೂತಕಾಲಾಭಿಮಾನಿಗಳು ಹೇಳಿದರೆ ಈ ಕಾಲದವರು ಸಾಧಾರಣವಾಗಿ ಅವುಗಳ ದೊಡ್ಡಸ್ಥಿಕೆಯನ್ನು ಅಷ್ಟಕ್ಕಾಗಿಯೇ ಒಪ್ಪಿಕೊಳ್ಳಲಾರರು. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ (1) ಜನ ಸಂಖ್ಯೆಯು ದಿನೇ ದಿನೇ ಬೆಳೆಯುತ್ತಿರುವುದು, (2) ಭೌತಿಕ ಶಾಸ್ತ್ರಜ್ಞಾನವು ಎಲ್ಲಾ ಕಡೆಯಲ್ಲೂ ಹಬ್ಬುತ್ತಿರುವುದು. (3) ಜೀವಿತದ ಅವಶ್ಯಕತೆಗಳು ಕೊನೆಗಾಣುವುದಕ್ಕಾಗಿ ಉಂಟಾದ ಯಂತ್ರಗಳು, ಸಲಕರಣೆಗಳು, (4) ಪ್ರಯಾಣವು ವೇಗವಾಗಿಯೂ, ಸುಲಭವಾಗಿಯೂ ಇರೋಣದರಿಂದ ಅನೇಕ ಜನಾಂಗಗಳ ಜ್ಞಾನವೂ, ಧರ್ಮಗುಣ ದೋಷಗಳೂ ತಿಳಿದು ಬರುವದು, (5) ಜೀವನದ ಸಂಗ್ರಮವು ಬಿಕ್ಕಟ್ಟಾದರೂ ಅದರಲ್ಲಿ ಭೌತಿಕ ಸೌಕರ್ಯಗಳಿಂದ ಉಂಟಾದ ಜ್ಞಾನಯುತ ಕುತೂಹಲವು ಇರುವದು, (6) ವಿಚಾರ ವಿನಿಮಯದ ಸೌಕರ್ಯದಿಂದಲೂ, ಹೆಚ್ಚಿಣದರಿಂದಲೂ ನಾಶವಾಗುತ್ತಿರುವ ಅಂಧಶ್ರದ್ಧೆಯು.

ಇಷ್ಟು ನಷ್ಟಗಳ ಭಾರವನ್ನು ಮನುಷ್ಯನು ಈಗ ಕೈ ಕಟ್ಟಿ ಕೂತುಕೊಂಡು ತಾನು ಆಕಾಶದಲ್ಲಿ ಊಹಿಸುತ್ತಿರುವ ದೇವರ ತಲೆಯ ಮೇಲೆ ಹಾಕುವುದಿಲ್ಲ. ಸ್ವಬುದ್ಧಿಯಲ್ಲಿ ಆತನ ಶ್ರದ್ಧೆಯು ಹೆಚ್ಚಿದಂತೆಯೇ ಆತನ ವಿಕಾಸವೂ ಹೆಚ್ಚಾಗುತ್ತದೆ. ಪ್ರತಿಯೊಂದು ಅನುಭವದ ಕಾರಣವನ್ನು ಹುಡುಕುವುದರ ಕಡೆಗೆ ಆತನ ತಲೆಯು ಈ ಕಾಲದಲ್ಲಿ ಹೋಗುತ್ತಲಿದೆ. ಇಂಥಾ ಶೋಧದಿಂದ 'ಉದ್ಧರೇದಾತ್ಮನಾತ್ಮನಂ' ಎಂಬಂತೆ ಆತನು ತನ್ನ ಉದ್ಧಾರವನ್ನು ತನ್ನ ಕೈಯಿಂದ ತಾನೇ ಮಾಡಲುದ್ಯುಕ್ತನಾಗಿರುತ್ತಾನೆ. ಇದಕ್ಕಾಗಿ ಆತನು ಸಕಲ ಶಕ್ತಿಗಳನ್ನು ತನ್ನಲ್ಲಿಯೇ ಹುಡುಕಬೇಕಾಗಿದೆ. ಇದನ್ನೆಲ್ಲ ವಿಮರ್ಶಿಸಿದರೆ ಆತನಿಗೂ ಆತನ ಹಿರಿಯರಿಗೂ ಬಹಳ ಗಂಜಾಂತರ.

ಆತಂಕವೇನೋ ಒಂತು ಸರಿಯೆ. ಆದರೆ ಅದು ನಿಷ್ಕಾರಣವಾಗಿ ಏನೂ ಬರಲಿಲ್ಲ. ಅದು ಊಹಾ ಮೋಹಗಳ ಫಲವಲ್ಲ. ಜೀವನ ಸಂಗ್ರಾಮದಲ್ಲಿ ಪ್ರಾಣ ಪರಿಪೋಷಣೆಯ ಹಾದಿಯಲ್ಲಿಯೇ ಸಹಜವಾಗಿ ಯುವಕರಿಗೆ ತಟ್ಟಿದ ವಿಷಯವೇ ಈ ಸ್ವತಂತ್ರ ವಿಚಾರ. ಈಗ ಕೈಚಾಚಿ ಬೇಡುವುದರಲ್ಲಿ ಅಪ್ಪನಿಗಿದ್ದ ನಂಬಿಕೆಯು ಮಗನಿಗಿಲ್ಲ. ಸಾಹಸದಲ್ಲಿಯೂ ವಿವೇಕದಲ್ಲಿಯೂ ಬಿಡಲಾರದ ನಂಬಿಕೆಯನ್ನಿಟ್ಟುಕೊಂಡ ಯುವಕರಿಗೆ ಸ್ವರ್ಗ ನರಕಗಳ ಪರಿವಿಯೇ ಇಲ್ಲ. ಆದರೆ ಇಷ್ಟಕ್ಕೇನೂ ಸಂದೇಹವಿಲ್ಲ. ಲೋಕ ಸಂಗ್ರಹ ಆತ್ಮ ವಿಕಾಸ ಮುಂತಾದ ಸನಾತನ ಧರ್ಮಾಂಗಳ ಅಭಿವೃದ್ಧಿಯು ಎಲ್ಲ ಕಡೆಯಲ್ಲಿಯೂ ಯುವಕರಲ್ಲಿ ಹೆಚ್ಚುತ್ತಲೇ ಇದೆ. ಇವು ಎಲ್ಲಿ ಕಾಣಬರುವುದಿಲ್ಲವೋ ಅಲ್ಲಿ ಈ ಯುವಕರಿಗೆ ಪೈಶಾಚ್ಯ ರೂಢಿಯೊಂದೇ ಕಂಡು ಬರುತ್ತದೆ. ಗೊಡ್ಡು ಆಚಾರವು ಇವರಿಂದ ಧರ್ಮವು ಕೆಟ್ಟಿತೆಂದು ಗೋಳನ್ನಿಟ್ಟರೂ ಇವರು ತಮ್ಮ ಹಾದಿಯನ್ನು ಬಿಡುವುದಿಲ್ಲ.

ಸುಮ್ಮನೆ ಏಕಾದರೂ ಬಿಟ್ಟಾರು? ಹಿರಿಯರ ಟೊಳ್ಳು ಊಹೆಗಿಂತಲೂ ಇವರ ಪ್ರತ್ಯಕ್ಷ ಅನುಮಾನ ಅನುಭವಗಳಿಂದ ಹುಟ್ಟಿದ ವಿಚಾರಗಳು ಏನೂ ಕಡಿಮೆ ಇಲ್ಲವಷ್ಟೆ? ಹೀಗಿರುವಾಗ ಬರೇ ನಿಂದೆಯಿಂದ ಯುವಕರು ಬಗ್ಗುವರೇ? ವಿವೇಕವೇ ಸದಾ ಮೂಲ್ಯವಾದ ವಸ್ತು ಎಂಬ ತಿಳಿವಳಿಕೆಯು ಎಲ್ಲಿ ಮೂಡಿದೆಯೋ ಅಲ್ಲಿಂದ ಮಾನವನ್ನು ಪಡೆಯಬೇಕಾದರೆ ಅವಿವೇಕಕ್ಕೆ ತಲೆ ಬಾಗಿಸಬೇಕಲ್ಲದೇ ತನ್ನ ಅಕೃತ್ರಿಮ ಹಿರಿತನದ ಆಕಾಶಕ್ಕೆತ್ತುವುದರಲ್ಲಿ ಏನೇನೂ ಉಪಯೋಗವಿಲ್ಲ. ಯುವಕರಿಗೆ 'ಜಾಗ್ರತೆ' ಎಂದು ಹಿರಿಯರು ಹೇಳಬಹುದಾದರೂ ಯುವಕರು ಹಿರಿಯರಿಗೆ 'ಎಚ್ಚರಿಕೆ' ಎಂದು ಹೇಳಿದರೆ ಏನೂ ತಪ್ಪಾಗಲಾರದು. ವಿಚಾರ, ವಿಕಾಸ ಇವು ಎಲ್ಲರ ಜನ್ಮಸಿದ್ಧ ಹಕ್ಕು; ಸ್ವಾತಂತ್ರ್ಯದ ಮೂಲ. ಇವನ್ನು ತಿರಸ್ಕರಿಸಿ ನಮಸ್ಕಾರವನ್ನು ಯಾರೂ ಪಡೆಯಲಾರರು. ಇವುಗಳನ್ನು ಒತ್ತಿ ಹಿಡಿದವರನ್ನು ನಿಂದಿಸಬೇಕು. ಅವರು ತಮ್ಮನ್ನು ವಂದಿಸಬೇಕೆಂದರೆ ಅದು ಆಗಲಾರದ ಕೆಲಸವೇ. ಕಿರಿಯರು ಹಿರಿಯರ ಬರೇ ಪ್ರತಿಬಿಂಬಗಳಿರಬೇಕೆಂದರೆ ಸಾಧ್ಯವಲ್ಲ. ಪ್ರಪಂಚದ ಸ್ಥಿತಿಯೇ ಅದಕ್ಕನುಕೂಲವಾಗಿಲ್ಲ. ಯಾರಾದರೂ ತಮ್ಮ ಮತವೇ ದೊಡ್ಡದೆಂದು ಹೊಂಚಿಕೊಳ್ಳುತ್ತ ತಮ್ಮ ಮಕ್ಕಳಿಗೆ ತಮ್ಮ ಗಿಳಿ ಪಾಠವನ್ನೇ ಕಲಿಸಬೇಕೆಂದು ಪ್ರಯತ್ನಿಸಿದರೆ ಕಾಲ ಮಹಿಮೆಯೇ ತನ್ನ ಕೈಯನ್ನು ತೋರಿಸಿ ಅಂಥಾ ಹಿರಿಯರನ್ನು ನಿಕಾಶರನ್ನಾಗಿ ಮಾಡುವದು. ಜೀಸು ನೊಣದಂತೆ ಹೊಸ ಜನ್ಮ ಸ್ಥಾನ, ಜಾತಿ ವರ್ಣಗಳನ್ನು ಲೆಕ್ಕಿಸದೇ ಒಳಗಣ ಸಾರವನ್ನು ಮಾತ್ರ ಹೀರುವ ಮನೋಗತಿಯು ಯುವಕರಲ್ಲಿ ಮನೆ ಮಾಡಿಕೊಂಡಿದೆ. ಇತರ ದೃಷ್ಟಾಂತವು ಕ್ರೈಸ್ತ ಮತ ಪ್ರಚಾರಕ್ಕಾಗಿ ಸ್ಥಾಪಿಸಿದ ನ್ಯೂಯಾರ್ಕಿನ ಯುವಕರು ತಮ್ಮ ಪರೀಕ್ಷೆಯಲ್ಲಿ ಕೊಟ್ಟ ಉತ್ತರಗಳೇ?

'ಧರ್ಮವೆಂದರೇನು?' ಎಂಬದು ಅವರಿಗೆ ಕೇಳಲ್ಪಟ್ಟ ಪ್ರಶ್ನೆಗಳಲ್ಲಿ ಒಂದು. ಪ್ರತಿಯೊಬ್ಬರೂ ತಮ್ಮ ತಮ್ಮ ವಿಚಾರಕ್ಕೆ ತೋರಿದ ಉತ್ತರಗಳನ್ನು ಕೊಟ್ಟಿದ್ದಾರೆಯೇ ಹೊರತು ಶಿಕ್ಷಕರು ತೋರಿದ ಉತ್ತರವನ್ನು ಕೊಟ್ಟವರು ತೀರ ಕಡಿಮೆಯೇ. ಕೆಳಗೆ ಒಂದೊಂದಾಗಿ ಕೊಡತಕ್ಕ ಅವರ ಉತ್ತರಗಳನ್ನು ವಾಚಕರು ಓದಿ ಅಮೇರಿಕದ ಯುವಕರ ತಲೆಯಲ್ಲಿ ಸೇರಿಕೊಂಡಿರುವ ಸ್ವಾತಂತ್ರ್ಯದ ಜೋರಿನ ಅಂದಾಜು ಮಾಡಿಕೊಳ್ಳಬಹುದು.

'ಯಾರೋ ಬರೆದಿಟ್ಟ ಸೂತ್ರಕ್ಕಾಗಲೀ ಸಿದ್ಧಾಂತಕ್ಕಾಗಲೀ ನನ್ನ ಜೀವನವನ್ನು ಸಂಪೂರ್ಣವಾಗಿ ನಡೆಸುವ ಅಧಿಕಾರ ಎದೆಯೆಂದು ನಾನು ಒಪ್ಪುವುದಿಲ್ಲ. ನಾನು ಯಾವ ಪುರಾತನ ಧರ್ಮವನ್ನೂ ಅಂಗೀಕರಿಸಲಿಕ್ಕಿಲ್ಲ. ಯಾವ ಚರ್ಚಿಗೂ ದೇವಸ್ಥಾನಕ್ಕೂ ಹೋಗಲಿಕ್ಕಿಲ್ಲ. ಏಕೆಂದರೆ ಅವಕ್ಕೆ ನನ್ನ ಜೀವಿತದೊಡನೆ ಯಾವ ಸಂಬಂಧವೂ ಇದ್ದಂತೆ ತೋರುವುದಿಲ್ಲ. ನನಗೆ ತೋರುವ ಧರ್ಮವು ಯಾವುದೆಂದರೆ ಪ್ರಕೃತಿಯ ನಿಯಮಕ್ಕೂ ಸಂಘಹಿತಕ್ಕೂ ತಾಳ ಮೇಳವಾಗಿ ಹೊಂದಿದ ಒಂದೇ ಒಂದು ಸರೂಜೋದ್ದಾರದ ವಿಷಯವು, ನನ್ನ ಈ ಧರ್ಮದಲ್ಲಿ ಸಹಜವಾಗಿಯೇ ಸೇರಿಕೊಂಡಿದೆ. ಬಹು ಜನರಂ ಬಹು ಹಿತವೇ ನನ್ನ ಮತದ ಸಾರಾಂಶ'

'ದೇವರು ಎಂದರೆ ಬದಲಾಗದ ನಿರ್ಮಾಣ ಸೂತ್ರಗಳಿಗೆ ಒಂದು ಬರೆಯ ಅಸ್ಪಷ್ಟವಾದ ಹೆಸರು. ಧರ್ಮವೆಂದರೆ ಅದನ್ನರಿತು ನಡೆಯುವದು. ಪ್ರಾರ್ಥನೆಗಳಿಂದಲೂ ಮುಡುಪು ಆಹುತಿಗಳಿಂದಲೂ ದೇವರನ್ನು ಮೆಚ್ಚಿಸಿ ತನ್ನಂತೆ ಮಾಡಿಕೊಳ್ಳಲಿಕ್ಕಾಗುವದೆಂದು ಭಾವಿಸುವವನ ತಲೆಯೇ ಕೆಟ್ಟಿದೆ ಎನ್ನಬೇಕು.'

ವಿವೇಕದಿಂದ ಸಕಲ ಮಾನವರನ್ನೊಡಗೂಡಿ ಕರ್ಮವನ್ನು ಮಾಡುವುದೇ ಪರಿಪೂರ್ಣತೆಯೇ ಮಾರ್ಗ.'

'ಎಲ್ಲ ಮಾತುಗಳೂ, ಧರ್ಮಗಳೂ, ಹೆಚ್ಚಾಗಿ ಬರೆಯ ನಂಬಿಕೆಯನ್ನೇ ಅವಲಂಬಿಸಿ ಇರೋಣದರಿಂದ ಅವುಗಳನ್ನು ಯುಕ್ತಾಯುಕ್ತ ದೃಷ್ಟಿಯಿಂದ ನೋಡುವದು ಒಂದು ವಿಚಾರವೇ ಸರಿ. ಧರ್ಮಗಳನ್ನು ಪರಿಶೀಲಿಸಬೇಕಾದರೆ ಉಪಯೋಗಿಸತಕ್ಕದ್ದು ಯುಕ್ತಾಯುಕ್ತಾ ಪರಿಜ್ಞಾನವಲ್ಲ. ಸಾಧ್ಯಾಸಾಧ್ಯ ಹಿತಾಹಿತ ದೃಷ್ಟಿ ವೂ ತ್ರಿದಿಂದಲೇ ಮತಗಳನ್ನು ವಿಮರ್ಶಿಸತಕ್ಕದ್ದು.'

'ಸ್ವರ್ಗದ ಪ್ರೀತಿಯು, ನರಕದ ಭೀತಿಯು ಚಿಲ್ಲರೆ ಮನುಷ್ಯನನ್ನು ಸನ್ಮಾರ್ಗದಲ್ಲಿ ನಡೆಸೀತು. ಆದರೆ ಇವೆರಡನ್ನು ಲೆಕ್ಕಿಸದೆ ಫಲಾಪೇಕ್ಷೆಯು ಸಹ ಇಲ್ಲದೆ ಗ್ರೀಸ್ ದೇಶದ ಸ್ವೋಯಿಕರು ಹೇಳಿದಂತೆ ಮತ್ತು ಹಿಂದೂದೇಶದ ಭಗವದ್ಗೀತೆಯ ಉಪದೇಶದಂತೆ ಕರ್ಮವನ್ನು ಮಾಡುವುದು ಬಹಳ ಮೇಲು.'

'ಬೌದ್ಧ ಧರ್ಮವು ಹೇಳಿದಂತೆ ಕಾರಣ ಪರಿಣಾಮ ದೃಷ್ಟಿಯಿಂದ ಕರ್ಮವನ್ನು ಪರಿಶೀಲಿಸಿ ತನ್ನ ಉದ್ಧಾರವನ್ನು ಕರ್ಮ ಸಿದ್ಧಾಂತದಂತೆ ತಾನೇ ಮಾಡಿಕೊಳ್ಳುವದು ಉತ್ತಮವೆಂದು ನನಗೆ ತೋರಿ ಬರುತ್ತದೆ.'

'ನಾನು ಚಿಕ್ಕಂದಿನಲ್ಲಿಂದ ಕ್ರೈಸ್ತ ಮತದ ನಿರ್ಬಂಧಗಳಲ್ಲೇ ಬೆಳೆದವನು. ನಮ್ಮ ಮನೆಯಲ್ಲಿ ನಡೆಸಿದ್ದೇ ಧರ್ಮವೆಂದು ತಿಳಿದುಕೊಂಡಿದ್ದೆ ಈಗ ಮಾಡಿದುದರ ಫಲವು ಸತ್ಯ ಮೇಲೆ ಸಿಗುವದು ಎಂದುಕೊಂಡಿದ್ದೆ.'

'ದೊಡ್ಡವನಾದ ಮೇಲೆ ಎಲ್ಲಾ ಮತಗಳ ಗ್ರಂಥಗಳನ್ನು ವಿಮರ್ಶಿಸಿದ ನಂತರ ನನಗೇನು ತೋಚಿತೆಂದರೆ ಸತ್ಯ ಮೇಲೆ ಜೀವಿಸಿ ಫಲವನ್ನು ಪಡೆಯುವುದಕ್ಕೋಸ್ಕರವಾಗಿ ಈಗ ಬದುಕಿರುವಾಗ ಕ್ರೈಸ್ತರಾದ ನಾವು ಈಗ ಸಾಯುತ್ತಲಿದ್ದೇವೆ. ಇದೊಂದು ಅವಿವೇಕ ಅಲ್ಲವೇ?'

'ಗ್ರೀಕರೂ ಹಿಂದುಗಳು ಹೇಳಿದಂತೆ ತನ್ನನ್ನು ತಾನು ತಿಳಿಯುವದು. ಅದರಲ್ಲಿಯೇ ದೈವವೂ ಇದೆ ಧರ್ಮವೂ ಇದೆ. ಅದಕ್ಕಾಗಿ ಕಷ್ಟಪಡುವದು ಮನುಷ್ಯನ ಕರ್ತವ್ಯವೆಂದು ನನಗೆ ಕಾಣುತ್ತದೆ. ಅದ್ದರಿಂದಲೇ ತನಗೂ ಸೃಷ್ಟಿಗೂ ಇರುವ ಸಂಬಂಧವು ತಾನೇ ತೋರುತ್ತದೆಂದು ನನಗೆ ಕಾಣುತ್ತದೆ. ಸತ್ಯ ಮೇಲೆ ಗೋರಿಯ ಮುಂದೆ ಆಚೆ ಕಡೆ ಏನಿದೆಯೋ ನಾನುಕಾಣೆ. ಸಾಕಾರ ದೇವನೆಂದರೇನೋ, ಶಾಶ್ವತವಾದ ಆತ್ಮವೆಂದರೇನೋ ನನಗೊಂದೂ ತಿಳಿಯದು. ಬರೆಯ ಊಹೆಗಳಿಗೆ ನಾನು ಧರ್ಮವಂದೆ ಹೇಳಲಾರೆ.'

'ಆತ್ಮಜ್ಞಾನವೇ ಬಹು ಶ್ರೇಷ್ಠವಾದುದೆಂದು ನನಗೆ ತೋರುತ್ತದೆ. ಚರ್ಚ್‌ಗೆ ನೂರಾರು ಮುಂದಿಯೊಡನೆ ಪ್ರಾರ್ಥಿಸುವುದರಲ್ಲಿ ಯಾವ ಧರ್ಮವಿದ್ದಂತೆಯೂ ನನಗೆ ತೋರಿ ಬರುವುದಿಲ್ಲ. ನಿಜವಾಗಿಯೂ ಧರ್ಮವಲಂಬಿಗಳಾಗಬೇಕಾದರೆ ವಿವೇಕಾನುಭವಗಳಲ್ಲಿ ಹೆಚ್ಚಿನ ಶ್ರದ್ಧೆಯನ್ನಿಡಬೇಕೇ ಹೊರತು ಚರ್ಚಿನ, ಅಧಿಕಾರ ಗ್ರಂಥಗಳ ಅರ್ಥದಲ್ಲಿ ಅಲ್ಲ.'

ನಮೂನೆಗಾಗಿ ಕೆಲವರ ಉತ್ತರಗಳು ಮಾತ್ರವೇ ಕೊಡಲ್ಪಟ್ಟಿವೆ. ಪರೀಕ್ಷಕರು ತಮ್ಮ ಇಚ್ಛೆನುಸಾರವೆಂದ ವಿಚಾರಗಳನ್ನು ಈ ಉತ್ತರಗಳಲ್ಲಿ ಪಡೆಯದೆ ಇದ್ದರೂ ಅಧಿಕ ಪ್ರಸರಗವೆಂದು ಅವನ್ನು ತಿರಸ್ಕರಿಸದೆ ಅವಕ್ಕೆ ತಕ್ಕ ಮಾನವನ್ನು ಕೊಟ್ಟೇ ಇದ್ದುತ್ತಾರೆ. ಅಂಥಾ ವಾತಾವರ್ಣವು ನಮ್ಮ ಯುವಕರಿಗೂ ಹಿರಿಯರಿಂದ ಲಭಿಸುವದೋ?

ಸೆಂಟ್ರಲ್ ಬ್ಯಾಂಕು ವಿಚಿಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ವಿಚಿಟಿಂಗು ಈ ತಾರೀಕು 21—9—35 ರಲ್ಲು ಬೆಳಿಗ್ಗೆ 11 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು.

1. ಮೆ. ಗಳಾದ ಪಂದ್ಯಂಡ ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) 2. ಸಟ್ಟಡ ಯಂ. ಉತ್ತಪ್ಪನವರು, 3. ಐನಂಡ ಕಾರ್ಯಪ್ಪನವರು, 4. ಉದಿಯಂಡ ಮಾಚ್ಚಯ್ಯನವರು, 5. ಕಂಬೀರಂಡ ಬೆಳ್ಯಪ್ಪನವರು, 6. ಎಸ್. ಯನ್. ರಾಮಶೆಟ್ಟಿಯವರು, 7. ಬಲ್ಲಚಂಡ ಬೆಳ್ಯಪ್ಪನವರು, 8. ಪಾಲೆಕಂಡ ತಿಮ್ಮಯ್ಯನವರು, 9 ನಡಿಕೇರಿಯಂಡ ಸಂ.ಬೈಯ್ಯನವರು, 10. ಚೇಂದಿರ ತಮ್ಮಯ್ಯನವರು, 11. ಪಿ. ಜಿ. ಮುದ್ದಮ್ಮಯ್ಯನವರು 12 ಕೊಳ್ಳಿಮಾಡ ಕಾರುಂಬಯ್ಯನವರು, 13. ರಾ. ಸಾ. ಪಾಂಡಂಡ ಚಂಗಪ್ಪನವರು ಮತ್ತು 14. ಮನಿಯಪಂಡ ಯಂ. ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿ)

ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರೂ ನಾನ್ ಕ್ರೆಡಿಟ್ ಸೀನಿಯರ್ ಇನ್ಸ್‌ಪೆಕ್ಟರು ಮೆ. ಪಿ. ಯಂ. ಚಂಗಪ್ಪನವರೂ ಸಹ ಹಾಜರಿದ್ದರು.

ಡೈರೆಕ್ಟರು ಮೆ. ರಾ ಐಚಿಟ್ಟಿರ ಸಂ.ಬೈಯ್ಯನವರು ಗೈರಾಜರಾಗಿದ್ದರು.

1. ಕಳೆದ ವಿಚಿಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಷೂರೆನ್ಸ್ ಸೊಸೈಟಿಯ ಲೋಕಲ್ ಬೋರ್ಡಿನ ಕಳೆದ ವಿಚಿಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

3. ಕಳೆದ ಅಗೋಸ್ತು ತಿಂಗಳ ಜಮಾ ಮತ್ತು ಖರ್ಚಿನ ಲೆಪ್ಪ ಓದಿ ಮಂಜೂರ್ಮಾಡಲಾಯಿತು.

ಹಿಂದಳ ತಿಂಗಳ ಸಿಲ್ಕು	ರೂ.	10726	9 3
ಈ ತಿಂಗಳಲ್ಲು ವಸೂಲಾತಿ		13074	15 0
ಜಮ್ಮ.		23801	8 3
ಸದರಿ ತಿಂಗಳಲ್ಲು ಖರ್ಚು		9678	6 0
ಬಾಕಿ ಸಿಲ್ಕು ರೂ.		14123	2 3

4. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ಕಡಗದಾಳು ಸೊಸೈಟಿಗೆ ರೂ. 1500, (2) ಗಾಳಿಬೀಡು ಸೊಸೈಟಿಗೆ 725, (3) ಹೊದವಾಡ ಸೊಸೈಟಿಗೆ 800 ಮತ್ತು (4) ಅಮ್ಮತ್ತಿ ಸೊಸೈಟಿಗೆ 1500.

5 ಈ ಕೆಳಗಿನ ಸೊಸೈಟಿಗಳಿಗೆ ಕಾರಣಾಂತರಗಳಿಂದ ಸಾಲಗಳು ಮಂಜೂರಾಗಲಿಲ್ಲ. (1) ಈರಳಿವಳಮಾಡಿ ಸೊಸೈಟಿಗೆ ಮತ್ತು (2) ಚೆಂಬೆಬೆಳಿಯೂರು ಲಂಕಾನ ಸೊಸೈಟಿಗೆ.

6. ಬ್ಯಾಂಕಿಗೆ ಸಲ್ಲಿಸಬೇಕಾದ ವಾಯಿದೆ ವಿರೂದ ಬಾಕಿ ರೂ. 1971—9—0 ಗಳಿಗೆ ಹೆಚ್ಚಿನ 10 ಕಂತ್ಸುಗಳನ್ನು ಕೊಡಿಸಿ ಕೊಡಬೇಕಾಗಿಯೂ ತಾ. 25—8—34 ರ ರೆಸೊಲ್ಯೂಶನ್ ನಂಬ್ರ 3136 ರ ಪ್ರಕಾರ ಮೇಲ್ಕಂಡ ವೊಬಲಗುಗಳ ಶೇಕಡ 25 ರಷ್ಟು ವೊಬಲಗನ್ನು ಬ್ಯಾಂಕಿಗೆ ಸಲ್ಲಿಸಲು ಈಗಿನ ಆರ್ಥಿಕ ಹೀನ ದೆಸೆಯಿಂದ ಅನಾನುಕೂಲವೆಂತಲೂ ವಗೈರೆಯಾಗಿ ಅಜ್ಜಮಾಡ ಕುಟುಂಬದ ಸಂಘದವರು ಬರಕೊಂಡ ಅರ್ಜಿಯನ್ನು ಓದಲಾಯಿತು.

ಸದರಿ ಸೊಸೈಟಿಯವರು ಬ್ಯಾಂಕಿಗೆ ಸಲ್ಲಿಸಬೇಕಾದ ವಾಯಿದೆ ವಿರೂದ ಹಣಗಳ ಪೈಕಿ ನಾಲ್ಕರಲ್ಲಿ ಒಂದು ಹಿಸೆಯನ್ನಾದರೂ ಬರುವ 1936 ನೇ ಇಸವಿ ಮಾರ್ಚ್ ಆಖೈರು ವಳಗೆ ಸಲ್ಲಿಸಿದ್ದೇ ಆದರೆ ಅವರಿಗೆ ಹೆಚ್ಚಿನ ಕಂತುಗಳನ್ನು ಕೊಡುವ ವಿಷಯ ಆಲೋಚಿಸಬಹುದೆಂತ ತೀರ್ಮಾನವಾಯಿತು.

7. ತಾ. 31—8—35ರ ರೆಸೊಲ್ಯೂಶನ್ ನಂಬ್ರ 3546ರ ಪ್ರಕಾರ ಗೌರವ ಕಾರ್ಯದರ್ಶಿಯವರು ಸೆಂಟ್ರಲ್ ಬ್ಯಾಂಕಿಗೂ ಮತ್ತು ಟೌನ್ ಸೊಸೈಟಿಗಳಿಗೂ ಆಡಿಟ್ ಫೀಜು ವಿಧಿಸಬೇಕೆಂದು ಮೆ. ಗಿರಿಯಪ್ಪ ಬಿ. ಎ. ಯವರು ಬರೆದಿರುವ ಸಿಫಾರ್ಸನ್ನು ವಿರೋಧಿಸಿ ಅವರು ಬರೆದು ತಯಾರಿಸಿದಂತ ಒಂದು ಕರಡು ರಿಪೋರ್ಟನ್ನು ಓದಲಾಯಿತು.

ಸದರಿ ಕರಡು ಪತ್ರವನ್ನು ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರ ಮೂಲಕ ಕಮಿಷನರ್‌ರವರಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು.

8. ಕಣಗಾಲು ಸೊಸೈಟಿಯ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಿಲ್ಲವೆಂದು ಶನಿವಾರಸಂತೆ ಹೋಬಳಿ ಯೂನಿಯನ್ ಪ್ರೆಸಿಡೆಂಟರು ಬರಕೊಂಡ ರಿಪೋರ್ಟನ್ನು ಓದಲಾಯಿತು.

(8ನೇ ಪುಟಕ್ಕೆ ಸಾಗಿದೆ.)

ಕೊಡಗು

ಅಕ್ಟೋಬರ್ ತಾ. ೪ ನೇ ಶುಕ್ರವಾರ ೧೯೩೯.

ಇಂಡಿಯೊ ಎಸೆಂಬ್ಲಿಯಲ್ಲಿ ಜನರ ಪ್ರತಿನಿಧಿಗಳ ಬಹುಮತದ ತೀರ್ಮಾನವನ್ನು ಉಲ್ಲಂಘಿಸಿ, ರಾಷ್ಟ್ರೀಯ ಪತ್ರಿಕೆಗಳನ್ನು ಮೂಲೆಗೊತ್ತಲು ಸಾಧನವಾದ 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್' ಮಸೂದೆಯನ್ನು ವೈಸರಾಯರು ಮುಂಜೂರು ಮಾಡಿದ್ದಕ್ಕಾಗಿ ನಮ್ಮ ನಿಷೇಧವನ್ನು ಸೂಚಿಸುವ ಬಗ್ಗೆ ಈ ವಾರದ ಅಗ್ರಲೇಖನವನ್ನು ಪ್ರಕಟಿಸಿರುವುದಿಲ್ಲ.

ಜನಾಂಗಗಳ ಕೂಟವೂ, ಯುದ್ಧವೂ.

ಇಟಲಿ—ಅಬಿಸೀನಿಯಾ ಸಮಸ್ಯೆಯು ಇಂದಿನ ಯೂರೋಪಿನ ರಾಷ್ಟ್ರಗಳ ಅಸ್ತಿತ್ವವನ್ನೇ ಅಲ್ಲಾಡಿಸುತ್ತಲಿದೆ. ಪ್ರಪಂಚದ ಅಗ್ರಗಣ್ಯ ರಾಷ್ಟ್ರಗಳೆಲ್ಲವೂ ದೊಡ್ಡ ಸಿಡಿಮದ್ದಿನ ಭಂಡಾರಗಳೆಂದೆನ್ನಲೂ ಬಹುದು. ಬರೀ ಒಂದು ಕಿಡಿ ಎಲ್ಲಾದರೂ ಬಿದ್ದಿತಾದರೆ ಸಾಲ್ಲವೂ ಏಕ ಕಾಲದಲ್ಲೇ ಸಿಡಿಯಬಹುದು. ಇಂದಿನ ಕಿಡಿಯೆಂದರೆ ಇಟಲಿ — ಅಬಿಸೀನಿಯಾ ಯುದ್ಧ. ಕಿಡಿ ಹಾರಿತೆಂದರೆ, ಯಾವ ಯಾವ ಮದ್ದಿನ ಭಂಡಾರಗಳಿಗೆ ಬೆಂಕಿ ಹಿಡಿಯುವದೋ ಹೇಳಲಸಾಧ್ಯ. ಈ ಅನಾಹುತವನ್ನು ನಿವಾರಿಸಲು ಜಿನೀವಾದಲ್ಲಿ ಅಂತರಾಷ್ಟ್ರ ರಾಜಕೀಯ ಮುಖಂಡರು ಸಭೆ ಸೇರಿರುವರು. ಜನಾಂಗಗಳ ಕೂಟವು ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಈ ಅನಾಹುತವನ್ನು ನಿವಾರಿಸಿದ್ದಾದರೆ ಅದರ ಜನ್ಮವು ಸಾರ್ಥಕವಾಯಿತೆನ್ನಬಹುದು. ಕಳೆದ ಸಪ್ಟಂಬರು ತಿಂಗಳು ಇಡೀ ಜಿನೀವಾದಲ್ಲಿ ಈ ಸಮಸ್ಯೆಯ ಚರ್ಚೆಯ ನಡೆದು ಅದರಿಂದ ಒಂದು ರಾಜೀ ತೀರ್ಮಾನವು ಹೊರಬಿದ್ದಿತು. ಆ ತೀರ್ಮಾನವನ್ನು ಇಟಲಿಯು ತಿರಸ್ಕರಿಸಿದ್ದರಿಂದ ಈಗ ಪುನಃ ಒಂದು ರಾಜಿ ಪ್ರಸ್ತಾಪದ ಮಾತು ಕತೆಗಳು ಪ್ರಾರಂಭವಾಗಿವೆ. ಈ ರಾಜಿ ಪ್ರಸ್ತಾಪಗಳೂ ತಿರಸ್ಕರಿಸಲ್ಪಟ್ಟದ್ದಾದರೆ ಇನ್ನು ಯುದ್ಧನಿಶ್ಚಯ. ಹಾಗೆ ಯುದ್ಧವು ನಿಶ್ಚಯವಾದಲ್ಲಿ ಜನಾಂಗಗಳ ಕೂಟ ನಿಯಮಕ್ಕೆ ವಿರುದ್ಧವಾಗಿ ವರ್ತಿಸುವ ರಾಷ್ಟ್ರ ಯಾ ರಾಷ್ಟ್ರಗಳ ವೇಲೆ ಲೀಗಿನವರು ವಿಧಿಸಬಹುದಾದ ಶಿಕ್ಷೆಯೇ 'ಲೀಗ್ ಸ್ಯಾಂಕ್ಷನ್'ಗಳು. ಈ 'ಲೀಗ್ ಸ್ಯಾಂಕ್ಷನ್'ಗಳು ಎರಡು ವಿಧವಾಗಿವೆ. ಆರ್ಥಿಕೋಪಾಯ ಮತ್ತು ಯುದ್ಧೋಪಾಯ.

ಯಾವದೇ ರಾಷ್ಟ್ರವು ತಾನು ಭಾಗಿಯಾದ ಒಡಂಬಡಿಕೆಗಳನ್ನು ಮುರಿದು ಕಾಲ್ಕೆರೆದು ಮತ್ತೊಂದು ರಾಜ್ಯದ ಮೇಲೆ ಧಾಳಿ ಗೈದಲ್ಲಿ, ಅಂಥ ರಾಷ್ಟ್ರಕ್ಕೆ ಯುದ್ಧ ಸಮಯದಲ್ಲಿ ಬೇಕಾಗಬಹುದಾದ ಕಚ್ಚಾಮೂಲುಗಳೂ ಮತ್ತು ಆಹಾರ ಸಾಮಗ್ರಿಗಳೂ ಹೋಗದಂತೆ ಅಡ್ಡಿಮಾಡುವದೇ ಆರ್ಥಿಕೋಪಾಯದ ಸಾರಾಂಶ.

ಈ ಮೊದಲು ದಕ್ಷಿಣ ಅಮೇರಿಕದ ಬೋಲಿವಿಯಾ ಮತ್ತು ಪೆರಾಗುವೆಗಳೊಳಗೆ ಕಲೆಯೆತ್ತಿದ ಮನಸ್ತಾಪಗಳಿಂದ ಯುದ್ಧವು ಸಂಭವಿಸದಂತೆ ಮಾಡಿದ್ದು ಈ ರೀತಿಯಿಂದಲೇ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಈ ಮಾರ್ಗದಿಂದ ಏನೂ ಪ್ರಯೋಜನವಾಗಲಾರದು ಏತಕ್ಕೆಂದರೆ, ಯುದ್ಧ ಸಾಮಗ್ರಿಗಳನ್ನು ಯಥೇಚ್ಛವಾಗಿ ತಯಾರಿಸುವ ಜರ್ಮನಿ, ಜಪಾನು, ಯುನೈಟೆಡ್ ಸ್ಟೇಟ್ಸ್ ಮುಂತಾದ ರಾಷ್ಟ್ರಗಳು ಜನಾಂಗಗಳ ಸಂಘದಲ್ಲಿರುವದಿಲ್ಲ. ಆದ್ದರಿಂದ ಈ ಸ್ಯಾಂಕ್ಷನುಗಳನ್ನು ಜಾರಿಯಲ್ಲಿ ತಂದಿದ್ದಾದರೂ ಸಹ ಯುದ್ಧೋನ್ಮತ್ತವಾದ ರಾಷ್ಟ್ರಕ್ಕೆ ಯುನೈಟೆಡ್ ಸ್ಟೇಟ್ಸ್, ಜರ್ಮನಿ ಮತ್ತು ಜಪಾನು ದೇಶಗಳಿಂದ ಯಥೇಚ್ಛವಾದ ಯುದ್ಧ ಸಾಮಗ್ರಿಗಳ ಸರಬರಾಯಿಯಾಗುವದು. ಅಷ್ಟೇ ಅಲ್ಲ, ಇಪ್ಪತ್ತು ವರ್ಷಗಳ ಹಿಂದೆ ಯಾವ ರಾಷ್ಟ್ರಕ್ಕಾದರೂ ಯುದ್ಧದ ಮದ್ದಿಗಾಗಿ ದಕ್ಷಿಣ ಅಮೇರಿಕಾದ 'ಚಿಲಿ' ಎಂಬ ಪ್ರದೇಶದಿಂದ 'ನೈಟ್ರೇಟ್' ಎಂಬ ಪದಾರ್ಥವು ಹೋಗಬೇಕಾಗಿದ್ದಿತು. ಆದ್ದರಿಂದ ಆ 'ಚಿಲಿ' ಪ್ರಾಂತ್ಯದಿಂದ ನೈಟ್ರೇಟಿನ ವಹಿವಾಟನ್ನು ನಿಲ್ಲಿಸಿ ಪ್ರಪಂಚದಲ್ಲಿ ಎಲ್ಲಿಯಾದರೂ ಆಗಬಹುದಾದ ಯುದ್ಧಕ್ಕೆ ಅಡಚಣೆಯೊಡ್ಡಬಹುದಿತ್ತು. ಆದರೆ ಈಗ ಎಲ್ಲ ಮುಂದುವರಿದ ರಾಷ್ಟ್ರಗಳಲ್ಲಿ ಗಾಳಿಯಲ್ಲಿರುವ ನೈಟ್ರೊಜನಿನಿಂದಲೇ ಜೈಟ್ರೇಟನ್ನು ಒದಗಿಸಿಕೊಳ್ಳುವ ವಿಧಾನಗಳಿರುವದರಿಂದ ಯಾವ ಮುಂದುವರಿದ ರಾಷ್ಟ್ರವೂ ಈ ವಿಚಾರದಲ್ಲಿ ಪರಾವಲಂಬಿಯಾಗಿರುವದಿಲ್ಲ. ಇನ್ನು ಯುದ್ಧಕ್ಕೆ ಬೇಕಾದದ್ದು ತಾಮ್ರ, ನಿಕ್ಕಲ್, ಎಂಟಿಮನಿ, ಕಬ್ಬಿಣ ಮತ್ತು ವೊಟೇಷ್. ತಾಮ್ರ ನಿಕ್ಕಲ್ ಮೊದಲಾದವುಗಳು ಯುನೈಟೆಡ್ ಸ್ಟೇಟ್ಸ್‌ನಿಂದಲೂ, ಎಂಟಿಮನಿ ಜಪಾನಿನ ಕೈವಶದಲ್ಲಿರುವ ಉತ್ತರ ಚೈನಾ ಮತ್ತು ಚೈನಾದಿಂದಲೂ ಮತ್ತು ವೋಟೇಷ್ ಜರ್ಮನಿಯ ಸಂಹದ್ದಿನಿಂದಲೂ ಸಿಗುವದರಿಂದ ಲೀಗ್ ಸ್ಯಾಂಕ್ಷನುಗಳು ಪ್ರಯೋಗದಲ್ಲಿ ಬಂದರೂ ಇಟಲಿಗೆ ಅನಾಯಾಸವಾಗಿ ಈ ಸಾಮಗ್ರಿಗಳು ದೊರತೇ ದೊರೆಯುವವು

ಕಳೆದ ಫೋರ್ ಯುದ್ಧದಲ್ಲಿ ಜರ್ಮನಿಗೆ ಯಾವ ರಾಷ್ಟ್ರವೂ ಯುದ್ಧ ಸಾಮಗ್ರಿಗಳನ್ನು ಒದಗಿಸಬಾರದೆಂದು ಒಪ್ಪಂದವಿದ್ದರೂ ಕೂಡ ಜರ್ಮನಿಯು ವಿಶ್ವವರ್ಗದವರ ರಾಷ್ಟ್ರಗಳಿಂದ ತಟಸ್ಥವಾಗಿರುವ ರಾಷ್ಟ್ರಗಳ ಮೂಲಕ ಧಾರಾಳಯುದ್ಧ ಸಾಮಗ್ರಿಗಳನ್ನು ಪಡೆದರು ಆದ್ದರಿಂದ ಈ ಲೀಗ್ ಸ್ಯಾಂಕ್ಷನುಗಳು ಎಷ್ಟರ ಮಟ್ಟಿಗೆ ಅಪ್ರಯೋಗಿಕವಾದವೆಂಬದು ತಿಳಿದುಬರುವದು.

ಈ ಭೇದೋಪಾಯದಲ್ಲಿ ಹೆಚ್ಚು ಪ್ರಯೋಗಿಕವಾಗುವದೆಂದರೆ, ಆಹಾರ ಸಾಮಗ್ರಿಗಳ ತಡೆ. ಇದೂ ಈಗಕ್ಕೆ ಸಾಧ್ಯವಲ್ಲವೆಂದೆನ್ನಬಹುದು. ಯುನೈಟೆಡ್ ಸ್ಟೇಟ್ಸಿನಿಂದ ಗೋಧಿಯು ಧಾರಾಳವಾಗಿ ಬರುವದರಿಂದ ರಾಷ್ಟ್ರ ಸಂಘದವರು ಅದಕ್ಕೆ ತಡೆಯನ್ನು ಹಾಕಲಿಕ್ಕಾಗುವದಿಲ್ಲ.

ಇನ್ನೂ ಕೂನೆಯದೆಂದರೆ, ಜಲಮಾರ್ಗಗಳನ್ನು ಮುಚ್ಚುವದು ಈಗಿನ ಸಂದರ್ಭದಲ್ಲಿ ಸುವೇಜನ್ನು ಮುಚ್ಚುವದರಿಂದ ಯುದ್ಧವನ್ನು ಖಂಡಿತವಾಗಿಯೂ ನಿಲ್ಲಿಸಬಹುದು. ಆದರೆ ಸುವೇಜು ಕಾಲುವೆಯು ಯಾವ ರಾಷ್ಟ್ರದ ಅಧೀನದಲ್ಲೂ ಇಲ್ಲ. ಅದರ ವ್ಯವಸ್ಥೆಯು ಒಂದು ಕಂಪೆನಿಯಿಂದ ನಡೆಯುತ್ತಿದ್ದು ಆ ಕಂಪೆನಿಯ ಶೇರುಗಳು ಅರ್ಧಕಾಂಶ ಬ್ರಿಟಿಷ್ ಭಂಡವಾಲಗಾರರಿಂದಲೇ ಕೊಂಡುಕೊಳ್ಳಲ್ಪಟ್ಟಿದೆ. ಅಲ್ಲದೆ 1888 ನೇ ಇಸವಿಯ ಕಾನ್‌ಸ್ಟಾಂಟಿನೋಪಲಿನ ಒಪ್ಪಂದದ ಪ್ರಕಾರ ಸುವೇಜು ಕಾಲುವೆಯು ಸದಾ ಎಲ್ಲರಿಗೂ ತೆರೆದಿಡಬೇಕೆಂಬ ಶರತ್ತು ಇರುವದರಿಂದ ಇದೂ ಕೂಡ ಸಾಧ್ಯವಾಗುವದು ಸಂಶಯಾಸ್ಪದವಾಗಿದೆ.

ಆರ್ಥಿಕೋಪಾಯ ಇಷ್ಟಾಯಿತು, ಇನ್ನು ಯುದ್ಧೋಪಾಯ. ಈಗಿನ ಪ್ರಪಂಚದ ಸ್ಥಿತಿಯು 'ಇಬ್ಬರಿಗೆ ಗುದ್ದಾಟ ಮೂರನೆಯವನಿಗೆ ಲಾಭ' ಎಂಬ ಸಂದರ್ಭದ ನಿರೀಕ್ಷಣೆಯಲ್ಲಿದೆ ಯಾರಾದರೊಬ್ಬರಿಗೆ ಗುದ್ದಾಟವಾದರೆ ನನಗೇನಾದರು ಲಾಭವಾದೀತೆಂಬ ನಿರೀಕ್ಷಣೆಯಲ್ಲಿರುವಾಗ ಯುದ್ಧೋನ್ಮತ್ತ ರಾಷ್ಟ್ರದ ವಿರುದ್ಧರಾಷ್ಟ್ರ ಸಂಘಕ್ಕೊಳಪಟ್ಟ ರಾಷ್ಟ್ರಗಳೆಲ್ಲವೂ ಯುದ್ಧ ಯತ್ನಕ್ಕೆ ಸಿದ್ಧರಾಗುವದು ಸಾಧ್ಯವೇ ಅಲ್ಲ. ರಾಷ್ಟ್ರಗಳಲ್ಲಿ ಒಕ್ಕಟ್ಟು ಇಲ್ಲ. ಎಲ್ಲವೂ ನ್ಯಾಯಕ್ಕಿಂತ ಲಾಭದ ಕಡೆ ಹೆಚ್ಚು ದೃಷ್ಟಿಯನ್ನಿಟ್ಟಿದೆ.

ಲೀಗಿನ ಸ್ಯಾಂಕ್ಷನುಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗುವದೆಂಬದನ್ನರಿತೇ ಇಂದು ಇಟಲಿಯು ಇಷ್ಟು ಅಬ್ಬರಿಸುತ್ತಲಿರುವದು. ರಾಷ್ಟ್ರ ಸಂಘವು ಸ್ಯಾಂಕ್ಷನುಗಳನ್ನು ಜಾರಿಯಲ್ಲಿ ತಂದದ್ದೇ ಆದರೆ ದೊಡ್ಡ ಘೋರ ಸಂಗ್ರಾಮವೇ ಯೂರೋಪನ್ನಾಕ್ರಮಿಸುವದು. ಸುಮ್ಮನೆ ಕಾಲಹರಣ ಮಾಡುತ್ತ ಇಟಲಿಯ ದುರಾಶೆಗಳಿಗೆ ಎಡೆಕೊಟ್ಟಬಿದ್ದಾದರೆ ಇಟಲಿಯ ಇಂದಿನ ಸರ್ವಾಧಿಕಾರಿಯಾದ ಮುಸೋಲಿನಿಯು ನಾಳೆ ಯೂರೋಪಿನ ಸರ್ವಾಧಿಕಾರಿಯಾಗಲೂಬಹುದು.

ಮಹಾತ್ಮಗಾಂಧಿಯವರಜನ್ಮದಿನೋತ್ಸವ.

ಲೋಕ ವಿಖ್ಯಾತರೂ, ಬಡವರ ಉದ್ಧಾರಕರೂ ಆದ ಮಹಾತ್ಮ ಗಾಂಧಿಯವರು ಜನ್ಮವೆತ್ತಿ, ಈ ತಾ. 2ಕ್ಕೆ 66 ವರ್ಷಗಳಾದವು. ಈ ಉತ್ಸವವು ಭಾರತ ಭೂಮಿಯ ಮುಖ್ಯ ಕಡೆಗಳಲ್ಲೆಲ್ಲಾ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಕೊಡಗಿನವರು ಈ ವಿಷಯದಲ್ಲಿ ತಮ್ಮ ಕರ್ತವ್ಯವನ್ನು ಮಾಡಲು ಹಿಂಜರಿಯಲಿಲ್ಲ. ಗಾಂಧಿಜೀಯವರ ಜನ್ಮದಿನೋತ್ಸವವನ್ನು ಆಚರಿಸಲಿಕ್ಕಾಗಿ, ಕೊಡಗು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಈ ತಾ. 2ನೇ ಬುಧವಾರ ವೀರಾಜಪೇಟೆ ರೀಡಿಂಗ್ ರೂಮಿನ ಎದುರುಗಡೆಯಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿಸಲ್ಪಟ್ಟಿತು. ಮ. ರಾ. ನಾಯಡ ಬೆಳ್ಯಪ್ಪನವರು ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟರು. ಮ. ರಾ. ಪಿ. ಐ. ಬೆಳ್ಯಪ್ಪನವರು—'ಜಗದ್ವಂದ್ಯರಾದ ಮಹಾತ್ಮರು ಅದ್ವಿತೀಯ ರಾಜಕೀಯ ಮುಂದಾಳ್ಳೂ, ಅಸಾಧಾರಣ ಸಾಮಾಜಿಕ ಸುಧಾರಕರೂ, ಆರ್ಥಿಕ ಸುಧಾರಣೆಯ ವಿಶೇಷ ಧುರೀಣರೂ ಆಗಿದ್ದಾಗ್ಯೂ ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರು ಪ್ರಪಂಚದಲ್ಲಿ ಸತ್ಯವನ್ನೂ, ಅಹಿಂಸಾ ತತ್ವವನ್ನೂ ಪುನಸ್ಥಾಪಿಸಲು ಜನ್ಮವೆತ್ತಿದ ಧಾರ್ಮಿಕ ಮಹಾ ಪುರುಷರೆಂದೂ, ಅವರ ಜೀವಮಾನಕಾಲದಲ್ಲಿಯೇ ಜೀವಿಸುತ್ತಾ, ಅವರ ಜನ್ಮದಿನೋತ್ಸವದಲ್ಲಿ ಭಾಗವಹಿಸಲು ಅವಕಾಶ ದೊರೆತ ಜನರೆಲ್ಲರೂ ಪುಣ್ಯಶಾಲಿಗಳೆಂದೂ, ಮುಂತಾಗಿ ಒಂದು ಗಂಟೆಯು ಕಾಲ ಭಾಷಣ ಮಾಡಿದರು. ನಂತರ ಎಲ್ಲರೂ ಎದ್ದು ನಿಂತುಕೊಂಡು ಮೌನವಾಗಿ ಪಾರ್ಥನೆ ಮಾಡುತ್ತಾ ಈ ಕೆಳಗಿನ ಗೊತ್ತುವಳಿಯನ್ನು ಮಂಜೂರು ಮಾಡಿದರು.

"ಭಾರತ ಭೂಮಿಯ ಧಾರ್ಮಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಉದ್ಧಾರಕ್ಕಾಗಿ ಮಹಾತ್ಮ ಗಾಂಧಿಯವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸುವಂತೆ ಈ ಸಭೆಯು ಭಗವಂತನನ್ನು ಪ್ರಾರ್ಥಿಸುತ್ತದೆ."

ಹರಿಜನ ದಿನಾಚರಣೆ.

ಹಿಂದೂ ಮತಾವಲಂಬಿಗಳಾಗಿದ್ದರೂ ಮೇಲ್ಕರೆಗತಿಯ ಹಿರಿದೂಗಳಿಂದ ಅಸ್ಪೃಶ್ಯರೆಂದು ಭಾವಿಸಲ್ಪಡುತ್ತಿರುವ ಕೋಟ್ಯಂತರ ಹರಿಜನರ ಉದ್ಧಾರಕ್ಕಾಗಿ ಮಹಾತ್ಮಗಾಂಧಿಯವರು ಅಖಿಲ ಭಾರತ ಹರಿಜನ ಸೇವಾ ಸಂಘವನ್ನು ಸ್ಥಾಪಿಸಿ ಕಳೆದ ಸೆಪ್ಟೆಂಬರು ತಾ. 24ರಲ್ಲಿ ಮೂರು ವರ್ಷಗಳಾದವು. ಈ ಸಂಘದ 3ನೇ ವಾರ್ಷಿಕೋತ್ಸವವು ಹಿಂದೂ ದೇಶದ ಅನೇಕ ಕಡೆಗಳಲ್ಲಿ ಆಚರಿಸಲ್ಪಟ್ಟಿತು. ಕೊಡಗಿನ ಹರಿಜನ ಸೇವಾ ಸಂಘದವರೂ ಈ ದಿನವನ್ನು ಆಚರಿಸಿದರು. ಕಳೆದ ತಾ. 24 ನೇ ಮಂಗಳವಾರ ಬೆಳಿಗ್ಗೆ ಇಲ್ಲಿಯ ಹರಿಜನ ಸೇವಾಸಂಘದ ಸೆಕ್ರೆಟರಿಯವರಾದ ಶ್ರೀ ಪಿ ಐ ಬೆಳ್ಯಪ್ಪನವರು ಹರಿಜನ ಸೇವಾ ಬೋರ್ಡಿನ ಒಬ್ಬ ಸದಸ್ಯರಾದ ಶ್ರೀ. ಮಂಡೇಪಂಡ ಸೋಮಯ್ಯನವರ ಮತ್ತು ಹರಿಜನೋದ್ಧಾರ ಕೆಲಸಗಾರರಲ್ಲಿ ಒಬ್ಬರಾದ ಶ್ರೀ ಪುಳಿಯಂಡ ಸುಬ್ಬಯ್ಯನವರ ಸಮೇತ ಬೆಪ್ಪುನಾಡು ಅರಮೇರಿ ಗ್ರಾಮದಲ್ಲಿರುವ ಹರಿಜನರ ಕೇರಿಗೆ ಹೋಗಿ, ಅಲ್ಲಿಯ ಹರಿಜನ ಶಾಲಾ ಕಮಿಟಿಯ ಅಧ್ಯಕ್ಷರಾದ ಮ. ರಾ. ಬಲ್ಲಚಂಡ ಉತ್ತಯ್ಯನವರು ಮತ್ತು ಆ ಶಾಲಾ ಹೆಡ್ಮಾಸ್ತರಾದ ಮ. ರಾ. ಅಪ್ಪುಮಣ್ಣಯ್ಯನವರ ಜೊತೆಗೂಡಿ ಹರಿಜನರ ಮನೆಗಳನ್ನೆಲ್ಲಾ ಸಂದರ್ಶಿಸಿದರು. ನಂತರ ಅಲ್ಲಿಯ ಶಾಲೆಯಲ್ಲಿ ನೆರೆದಿದ್ದ ಹರಿಜನರಿಗೆ ಸುಮಾರು ಮೂರುಗಳನ್ನು ನಿರ್ಮಲವಾಗಿಟ್ಟುಕೊಂಡು, ವೈಯಕ್ತಿಕ, ಬಟ್ಟೆಗಳನ್ನೂ ಆಗಾಗ್ಗೆ ತೊಳೆಯುತ್ತಾ, ಮದ್ಯಪಾನ, ಸತ್ತ ಪ್ರಾಣಿಗಳ ಮಾಂಸ ಆಹಾರವನ್ನು ತ್ಯಜಿಸಿ, ತಮ್ಮ ಮಕ್ಕಳನ್ನೆಲ್ಲಾ ಶಾಲೆಗೆ ಕಳುಹಿಸುತ್ತಾ, ತಾವು ಮುಂದಕ್ಕೆ ಬರಬೇಕೆಂದು ಮಾರ್ಮಿಕವಾಗಿ ಮಿ. ಪಿ ಬೆಳ್ಯಪ್ಪನವರು ಬೋಧನೆ ಕೊಟ್ಟರು ಆ ಮೇಲೆ, ತಮ್ಮ ಮನೆಗಳನ್ನು ಚೊಕ್ಕಟವಾಗಿ ಇಟ್ಟುಕೊಂಡದ್ದಕ್ಕಾಗಿ ಕುಟ್ಟನಿಗೆ 1 ನೇ, ಕರುಂಬನಿಗೆ 2 ನೇ ಮತ್ತು ಸುಬ್ಬಿಗೆ 3 ನೇ ಇನಾಮುಗಳನ್ನು ಖಾದಿ ಒಬ್ಬಿಯ ರೂಪದಲ್ಲಿ ಹಂಚಲಾಯಿತು.

ವರ್ತಮಾನ ಸಂಗ್ರಹ.

ಜಿಲ್ಲೆ.

ಕಳೆದ ಆಗೊಸ್ತು ತಿಂಗಳಲ್ಲಿ ಕೊಡಗು ಪ್ರಾಂತ್ಯದಲ್ಲಿ 161 ಜನನಗಳೂ, 382 ಮರಣಗಳೂ ಸಂಭವಿಸಿದವು.

ಮೆ. ಜೆ. ಎ. ಯಂಗ್‌ಮನ್‌ರವರು ಕೊಡಗಿನ ಡಿಪ್ಟಿ ಕ್ಲೆ ಸ್ಕೌಟ್ ಕಮಿಷನರಾಗಿ ನೇಮಿಸಲ್ಪಟ್ಟಿರುವರೆಂದು ವರ್ತಮಾನ.

ಈ ತಾ. 17 ನೇ ಗುರುವಾರ ಸಾಯಂಕಾಲ 5 ಗಂಟೆ 1½ ನಿಮಿಷದಲ್ಲಿ ತುಲಾಕಾವೇರಿ ಸಂಕ್ರಮಣದ ತೀರ್ಥೋದ್ಭವವಾಗುವುದು.

ಅಖಿಲ ಭಾರತ ಹರಿಜನ ದಿನವನ್ನು ಕೊಡಗಿನ ಹರಿಜನ ಸೇವಾ ಸಂಘದವರು ಕಳೆದ ತಾ. 24 ರಲ್ಲಿ ಅರಮೇರಿ ಗ್ರಾಮದಲ್ಲಿ ಆಚರಿಸಿದರು.

ಈ ತಾ. 3 ರಲ್ಲಿ ಪೊನ್ನೆಟ್ಟಿಗೆ ಹೋಗಿರುವ ಕಮಿಷನರವರು ತಾ 8 ರಲ್ಲಿ ವಾಪಸು ಮಡಿಕೇರಿಗೆ ಬರುವರೆಂದು ತಿಳಿಯಬರುತ್ತದೆ.

ಮಹಾತ್ಮ ಗಾಂಧಿಯವರ 67 ನೇ ಜನ್ಮದಿನೋತ್ಸವವನ್ನು ಆಚರಿಸುವ ಬಗ್ಗೆ ಈ ತಾ 2 ರಲ್ಲಿ ವೀರಾಜಪೇಟೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡಿಸಲ್ಪಟ್ಟಿತು.

ಕಳೆದ ಜುಲೈ ತಿಂಗಳ ಅಂತ್ಯದಲ್ಲಿ ಕೊಡಗು ಸರ್ಕಾರದ ವೆಚ್ಚವು ಆದಾಯಕ್ಕಿಂತ ಒಂದು ಲಕ್ಷ 7 ಸಾವಿರ ರೂಪಾಯಿಯಷ್ಟು ಹೆಚ್ಚಾಗಿದೆಯೆಂದು ಪ್ರಕಟವಾಗಿದೆ.

ವೀರಾಜಪೇಟೆಯಲ್ಲಿರುವ ಮೆ. ರಾ ಕೇತಿಯಂಡ ಕುಶಾಲಪ್ಪನವರಿಗೆ ಈ ತಿಂಗಳ ಗೋವಾ ಲಾಟರಿಯಲ್ಲಿ ರೂ. 1200 ಇನಾಮು ದೊರೆತ್ತಿದೆಯೆಂದು ತಿಳಿಯಬರುತ್ತದೆ

ಬೆಪ್ಪುನಾಡು ಬೆಳ್ಯಮೂಡು ಗ್ರಾಮದ ವಾತಾಡಲೇಟ್ ಬೆಳ್ಯಪ್ಪನವರ ಪತ್ನಿ ಬೊಳ್ಳಪ್ಪನವರು ಕಳೆದ ತಾ. 30 ರಲ್ಲಿ ತೀವಾಧೀನರಾದರೆಂದು ತಿಳಿದುಬಂದು ವಿಷಾದಿಸುತ್ತೇವೆ

ಇಂಡಿಯಾ ಸರ್ಕಾರದ ಗೊತ್ತಿ ಪಾಕರ್ಟಿಂಗ್ ಆಫೀಸರಾದ ಮೆ. ಯಫ್. ಎ. ಷಾರವರು ಕಳೆದ ತಾ. 29 ರಲ್ಲಿ ಮಡಿಕೇರಿಗೆ ಬಂದು, ಮರುದಿನ ವಾಪಸು ಹೋದರು.

ಕೊಡಗು ಡಿಸ್ಟ್ರಿಕ್ಟ್ ಫುಟ್‌ಬಾಲ್ ರೆಗ್ಯುಲೇಷನ್ನನ್ನು ತಿದ್ದುಪಡಿ ಮಾಡಿದ, ಕೊಡಗು ನ್ಯಾಯವಿಧಾಯಕ ಸಭೆಯಿಂದ ಮುಂಜೂರಾದ ಆಕ್ಟಿಗೆ ಗವರ್ನರ ಜನರಲ್‌ರವರ ಅಂಗೀಕಾರವು ಕಳೆದ ಆಗೊಸ್ತು ತಾ 31 ರಲ್ಲಿ ದೊರೆತ್ತಿದೆ.

ಕೊಡಗಿನ ತೂಕ ಮತ್ತು ಅಳತೆಗಳ ಆಕ್ಟಿನ ವೇರೆ ವೇರೆ ಪ್ರಾವ್ಯಿಜಂ ಮಾಡುವ ಅಧಿಕಾರ ಪೊಲೀಸು ಸಬ್ ಇನ್‌ಸ್ಪೆಕ್ಟರುಗಳಿಗೂ, ವಾರುಪತ್ಯಗಾರರುಗಳಿಗೂ ಮತ್ತು ಸಹಕಾರಿ ಸಂಘಗಳ ನಾನ್ ಕ್ರೆಡಿಟ್ ಇನ್‌ಸ್ಪೆಕ್ಟರವರಿಗೂ ಕೊಡಲಾಗಿದೆ.

ಈ ತಾ. 4 ರಲ್ಲಿ ನಡೆಯುವ ಮೈಸೂರು ಸಹಕಾರಿ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಬಂದಿರುವ ಇಂಗ್ಲೆಂಡಿನ ಪ್ರಸಿದ್ಧ ಸಹಕಾರಿಯೂದ ಡಾಕ್ಟರ್ ಯಫ್. ಸಿ ಫೇ ಯನರು ಈ ತಾ. 8 ರಲ್ಲಿ ಮಡಿಕೇರಿಗೆ ಬಂದು, ತಾ 9 ರಲ್ಲಿ ವೀರಾಜಪೇಟೆಗೆ ಹೊಗುವರೆಂದು ವರ್ತಮಾನ.

ಈ ತಾ. 5 ರಲ್ಲಿ ನಡೆಯುವ ಮೈಸೂರು ಪ್ರಾಂತೀಕ ಸಹಕಾರಿ ಸಮ್ಮೇಳನಕ್ಕೆ ಕೊಡಗಿನ ಸಹಕಾರಿ ಸಂಘಗಳ ರಿಜಿಸ್ಟ್ರಾರಾದ ಮೆ. ರಾ. ಕೆ. ಚಂಗಪ್ಪನವರೂ, ಸಹಕಾರಿ ಇನ್‌ಸ್ಪೆಕ್ಟರಾದ ಮೆ. ರಾ ಪಿ. ಯಂ ಚಂಗಪ್ಪನವರೂ ಹೋಗಿರುವರಾಗಿ ತಿಳಿಯಬರುತ್ತದೆ.

ಕಳೆದ ತಾ. 30 ರಲ್ಲಿ ಮೈಸೂರು ಮಹರಾಜ ಕಾಲೇಜಿನ ಪ್ರೊಫೆಸರಾದ ಮೆ. ರಾ. ಯನ್. ಕಸ್ತೂರಿ ಯಂ. ಎ, ಬಿ. ಎಲ್. ರವರು ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ ಪ್ರಸಂಚದ ಧರ್ಮಜಿಜ್ಞಾಸಿಗಳನ್ನು ಕುರಿತು ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ಒಂದು ಉಪನ್ಯಾಸವನ್ನು ಮಾಡಿದರು.

ಕಳೆದ ತಾ. 28 ಮತ್ತು 29 ರಲ್ಲಿ ಮದ್ರಾಸಿನಲ್ಲಿ ನಡೆದ ಮದ್ರಾಸು ಪ್ರಾಂತೀಕ ಸಹಕಾರಿ ಸಮ್ಮೇಳನಕ್ಕೆ ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರಾದ ಮೆ. ರಾ ಪಿ. ಐ. ಬೆಳ್ಯಪ್ಪನವರೂ ಮತ್ತು ಕಾರ್ಯದರ್ಶಿಯಂ ರಾದ ಮೆ ರಾ. ಯಂ. ಯಂ. ಬೆಳ್ಯಪ್ಪನವರು ಸದರಿ ಬ್ಯಾಂಕಿನ ಪ್ರತಿನಿಧಿಗಳಾಗಿ ಹೋಗಿದ್ದರು.

ಮಡಿಕೇರಿಯಲ್ಲಿ ಈ ವಾರ ಇಲಿಗಳು ಸಾಯುತ್ತಿದ್ದುವಾದರೂ ಪ್ಲೇಗು ಮನುಷ್ಯರಿಗ್ಯಾರಿಗೂ ಅಂಟಿರುವುದಿಲ್ಲ. ಇಷ್ಟರ ವರೆಗೆ ಹಬ್ಬಾಲೆಯಲ್ಲಿ 10 ಜನರಿಗೆ ಪ್ಲೇಗು ಅಂಟಿದರಲ್ಲಿ 3 ಮರಣಗಳುಂಟಾದವೆಂದೂ, ಸುಂಟಿಕೊಪ್ಪಲಲ್ಲಿ 4 ಜನರಿಗೆ ತಗಲಿದರಲ್ಲಿ ಇಬ್ಬರು ಮೃತಪಟ್ಟರೆಂದೂ, ಸುಂಟಿಕೊಪ್ಪದ ಸಂತೆಮಾಳವನ್ನು ಬದಲಾಯಿಸಲಾಗಿದೆಯೆಂದೂ, ಮಡಿಕೇರಿಯ ಸಂತೆಯನ್ನು ನಿಲ್ಲಿಸಲ್ಪಟ್ಟಿದೆಯೆಂದೂ ವರ್ತಮಾನವಿದೆ.

ಕೊಡಗಿನ ಟೆಂಟೋರಿಯಲ್ ಸಬ್‌ಡಿವಿಜನ್ನಿನ ಸುಬೇದಾರ್ ಮೇಜರ್ ಮನೆಯಪಂಡ ವಿಶ್ವನಾಥಯ್ಯನವರು, ಸುಬೇದಾರರುಗಳಾದ ಕುಯಿನಮುಡಿರ ಸುಬ್ಬಯ್ಯನವರು, ಮೂವೆರ ಕಾಳಪ್ಪನವರು ಮತ್ತು ಕಲ್ಯಾಟಂಡ ಬೆಳ್ಯಪ್ಪನವರು, ಹವಾಲ್‌ದಾರ್ ಮೇಜರುಗಳಾದ ಮೂಡಂಡ ಭೀಮಯ್ಯನವರು ಮತ್ತು ಎ ತಮ್ಮಯ್ಯನವರು ಮತ್ತು ಹವಾಲ್‌ದಾರ ಕೆ. ಎ ಮುದ್ದಣ್ಣನವರು—ಇವರುಗಳಿಗೆ ಕಾರ್ಯದಕ್ಷತೆಯ (ಎಫಿಷ್ಯನ್ಸಿ) ಮೆಡಲುಗಳು ದೊರೆತಿರೆಯೆಂದು ತಿಳಿಯಬರುತ್ತದೆ.

ಪಿ. ಡಬ್ಲ್ಯು. ಇಲಾಖೆಯ ಹೆಡ್ ಡ್ರಾಫ್ಟ್ಸ್‌ಮ್ಯನ್ ಆಗಿದ್ದು ಒಂದು ತಿಂಗಳ ಹಿಂದೆ ರಿಟಯರಾಗಿದ್ದ ಮೆ. ರಾ. ವಿ ರಾಮಲಿಂಗಯ್ಯನವರು ಆರೋಗ್ಯದಲ್ಲಿದ್ದು ಕಳೆದ ತಾ. 19 ರಲ್ಲಿ ಮಧ್ಯಾಹ್ನ ಊಟ ಮುಗಿಸಿಕೊಂಡು ಮಾರ್ಕೆಟ್ಟಿಗೆ ಹೋಗಲು ಅವರ ಮನೆಯಿಂದ ಹೊರಟವರು ಕೆಲವು ಗಜ ದೂರ ಹೋಗಿ ಹೃದಯದ ಬಲಹೀನತ್ವದಿಂದ ಏನೂ ಕೂಡದೆ ಅಲ್ಲಿಯೇ ಮಲಗಿದವರನ್ನು ಮನೆಗೆ ತಂದಲ್ಲಾ ಸ್ವಲ್ಪ ಹೊತ್ತಿನಲ್ಲಿಯೇ ಮೃತರಾದರೆಂದು ತಿಳಿದಲು ವ್ಯಸನಪಡುತ್ತೇವೆ.

ಕೊಡಗು ನ್ಯಾಯವಿಧಾಯಕ ಸಭೆಯ ಮುಂದಿನ ಜುನಾವಣೆಗೆ ಓಟು ಕೊಡಲು, 5 ರೂ ಜನ್ಮ ಕಂದಾಯದ ಬದಲು 3—8—0 ರೂ.ಯ ೂ, 10 ರೂ. ಸಾಗುಕಂದಾಯದ ಬದಲು 5 ರೂಪಾಯಿಯೂ, ಗಂಡಸರಿಗೆ ಸ್ಕೂಲ್ ಫೈನಲ್ ಪರೀಕ್ಷೆ ಪಾಸಾಗುವಿಕೆಯೂ. ಹೆಂಗಸರಿಗೆ ಲೋವರ್ ಸೆಕೆಂಡು ಪರೀಕ್ಷೆ ಪಾಸಾಗುವಿಕೆಯೂ ಅರ್ಹತೆಗಳಾಗಿರುವವು. ಅಲ್ಲದೆ ಕೌನ್ಸಿಲ್ ಆಫ್ ಸ್ಟೇಟಿನ ಜುನಾವಣೆಗೆ ಓಟು ಕೊಡಲು 200 ರೂ. ಸಾಗಿನ ದರದ ಕಂದಾಯ ಕೊಡುವಿಕೆಯು ಅರ್ಹತೆಯಾಗಿರುವುದೆಂದು ಪ್ರಕಟವಾಗಿದೆ. ಬೇರೆ ಚಿಕ್ಕ ಅರ್ಹತೆಗಳ ತಪಸೀಲನ್ನು ಬರುವ ವಾರ ಪ್ರಕಟಿಸಲಾಗುವುದು. ಫೆಡರಲ್ ಎಸೆಂಬ್ಲಿಗೆ ಸ್ಥಳೀಯ ಕೌನ್ಸಿಲಿನವರು ಒಬ್ಬ ಪ್ರತಿನಿಧಿಯನ್ನು ಆರಿಸುವರು.

ಕಳೆದ ತಾ. 28 ರಲ್ಲಿ ಸಡೆಸ ವೀರಾಜಪೇಟೆ ಮುನ್ಸಿಪಲ್ ಕಮಿಟಿ ಮೆಂಬರುಗಳ ಜುನಾವಣೆಯಲ್ಲಿ ಕ್ರೈಸ್ತರ ಪರ ಎರಡು ಸ್ಥಳಗಳಿಗೆ ಪೈಪೋಟಿ ಇಲ್ಲದೆ ರೆವೆರೆಂಡ್ ಫಾದರ್ ಡಿಸೋಜ ಮತ್ತು ಮೆ. ಅಬೆಲ್ ವಾಸರವರೂ, ಕೊಡಗೇತರ ಹಿಂದೂಗಳ ಪರ 4 ಸ್ಥಳಗಳಿಗೆ ಮೆ. ಗಳಾದ ಟಿ ಆರ್. ತಿರುವೆಂಗಡ ಪಿಳ್ಳೆ, ಆರ್. ಯಸ್. ಸುಬ್ಬರಾವ್, ಯಸ್. ಯಸ್. ರಾಮಮೂರ್ತಿ ಮತ್ತು ನೇಮುರಾಜಯ್ಯನವರೂ, ಕೊಡಗರ ಪರ 2 ಸ್ಥಳಗಳಿಗೆ ಮೆ. ಚಿಯಕಪೂವಂಡ ಭೀಮಯ್ಯನವರು ಉಮೇದುವಾರಿಕೆಯ ಅಪ್ಲಿಕೇಶನ್ನನ್ನು ವಾಪಸು ತೆಗೆದುಕೊಂಡ ಕಾರಣ ಮೆ ಗಳಾದ ಪಾಲೇಕಂಡ ತಮ್ಮಯ್ಯ ಮತ್ತು ಸಳಿಯಂಡ ಕುಶಾಲಪ್ಪನವರೂ, ಮುಹಮ್ಮದೀಯರ ಪರ 3 ಸ್ಥಳಗಳಿಗೆ ಮೆ. ಗಳಾದ ಡಿ. ಹೆಚ್. ಅಬ್ದುಲ್ ರಹಮಾನ್ ಸಾಹೇಬ್, ಖಾಜಿ ಮುಹಮ್ಮದ್ ಇಸೂಫ್ ಸಾಹೇಬ್ ಮತ್ತು ಕಂಡೋತ್ ಅಮ್ಮು ಕಾಕನವರೂ ಹೆಚ್ಚಿನ ಓಟುಗಳಿಂದ ಆರಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಹಿಂದೂದೇಶ.

ಕಪುರ್ತಲಾ ಮಹಾರಾಜರವರಿಗೆ ಹರ್ ಹೈಟ್ನೆಸ್ ರವರು ಭೇಟಿಯನ್ನು ಕೊಟ್ಟು ಅವನ್ನು ಸ್ವಾಗತೀಕರಿಸಿರುವರೆಂದು ಪ್ರಕಟವಾಗಿದೆ.

ಕಲ್ಕತ್ತಾ ಕಾರ್ಪೊರೇಶನ್ನಿನವರು ವಿಧವೆಯರಲ್ಲಿ ಗ್ರಾಮೋದ್ಯೋಗ ತಿಯ ಕುರಿತು ಶಿಕ್ಷಣವನ್ನು ಕೊಡಲು ಗ್ರಾನ್ಟುಗಳನ್ನು ಮಂಜೂರು ಮಾಡುತ್ತಿದ್ದಾರೆ.

ಕಲ್ಕತ್ತೆಯ ಹಿಂದೀ ದೈನಿಕ ಪತ್ರಿಕೆಯಾದ 'ವಿಶ್ವಮಿತ್ರ' ದ ಒಡೆಯರಿಂದ 1 ಕ್ರಾವಿರ, ಅದರ ಮುದ್ರಕ ಪ್ರಚಾರಕರಿಂದ 1 ಸಾವಿರ ರೂಪಾಯಿಗಳ ಭದ್ರತೆ ಕೇಳಲಾಗಿದೆ.

ದೇಶಭಕ್ತ ಸಿ. ಬಿ. ದಾಸರು 1908ನೇ ಇಸವಿಯ ಕ್ರಿಮಿನಲ್ ಖಾನೂನು ರದ್ದಾಗಬೇಕೆಂದು ಅಸೆಂಬ್ಲಿಯಲ್ಲಿ ತಂದ ಮಸೂದೆಯು ಸರ್ಕಾರದವರ ವಿರೋಧವಿದ್ದರೂ ಪಥ್ಯಲೋಚನೆಗಾಗಿ ಅಂಗೀಕೃತವಾಯಿತು.

ಹಿಂದುಸ್ಥಾನದ ಮಿಲಿಟರಿ ಎಕಾಡಮಿಗೆ ಸೇರುವುದಕ್ಕೆ ಸರಿಯಾದ ಅರ್ಹತೆಯುಳ್ಳ ಉಮೇದ್ವಾರರು ಮುಂದಕ್ಕೆ ಬರುತ್ತಿಲ್ಲವೆಂದು ಸೈನಾಧಿಪತಿಗಳು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ತಿಳಿಸಿದರು.

ಲಾಹೋರಿನ ಮಾಹಿದ್ ಗಂಜ್ ಮಸೀದಿಗೆ ಸಂಬಂಧಪಟ್ಟ ಚಳವಳದಲ್ಲಿ ಭಾಗವಹಿಸಿ ದಸ್ತಗಿರಿ ಮಾಡಲ್ಪಟ್ಟಿದ್ದ ಸುಮಾರು 123 ಮಂದಿ ಮುಸಲ್ಮಾನರ ಪೈಕಿ 110 ಜನರು ಕ್ಷಮೆ ಬೇಡಿದ್ದರಿಂದ ಬಿಡುಗಡೆ ಮಾಡಲ್ಪಟ್ಟಿರುವರು ಉಳಿದವರ ಮೇಲೆ ವ್ಯವಹಾರಣೆ ನಡೆಯುತ್ತಿದೆ.

ವಿವಾದದಲ್ಲಿರುವ ಲಾಹೋರಿನ ಮಸೀದಿಯ ಸ್ಥಳವನ್ನು ತಮಗೆ ಕೊಡಿಸಿಕೊಡಬೇಕೆಂದು ಅರಿಕೆ ಮಾಡಿಕೊಳ್ಳಲು ಕೇಂದ್ರ ಸಭಾಸದನದ ಮುಸ್ಲಿಂ ಮೆಂಬರು ವೈಸರಾಯರ ಬಳಿಗೆ ಒಂದು ಡೆಪ್ಯುಟೇಶನ್ನನ್ನು ಕೊಂಡು ಹೋಗಿದ್ದರು

ಹುಗ್ಲಿ ನದಿಯ ಮೇಲಿನ ಒಂದು ಹೊಸ ಸೇತುವೆಯ ನಿರ್ಮಾಣಕ್ಕಾಗಿ ಅನೇಕ ಬ್ರಿಟಿಷ್ ಫರ್ಮುಗಳೂ, ಹಿಂದೀ ಸಂಸ್ಥೆಗಳೂ ಕಂಟ್ರಾಕ್ಟಿನ ಟೆಂಡರುಗಳನ್ನು ಹಾಕಿರುವಲ್ಲಿ ಜರ್ಮನಿಯ ಕ್ರುಪ್ ಕಾಪ್ಸೆರು 17,50,000 ಪೌಂಡುಗಳ ಈ ಟೆಂಡರೇ ಬಹಳ ಕಡಿಮೆಯಾಗಿದ್ದು. ಕಾರಣ ಕ್ರುಪ್ ಕಾಪ್ಸಿಗೆ ಸರ್ಕಾರದ ಬೆಂಬಲವಿದೆ.

ಪಂಜಾಬಿನಲ್ಲಿ ಖಡ್ಗಗಳನ್ನು ಯಾರೂ ಲೈಸೆನ್ಸಿಲ್ಲದೆ ಹಿಡಿದುಬಹುದೆಂದು ಸರ್ಕಾರದವರು ತೀರ್ಮಾನಿಸಿದ್ದರ ಮೇಲೆ ಪಂಜಾಬಿನ ಮುಸಲ್ಮಾನರಿಗೆ ಬೇಕಾದ ಆಯುಧಗಳನ್ನು ತರೊರಿಸುವ ಏರ್ಪಾಡನ್ನು ಮಾಡುವುದರಲ್ಲಿದ್ದಾರೆ. ಹಿಂದೂಗಳೂ ಕೂಡ ಇವರಂತೆಯೇ, ತಮ್ಮದೊಂದು ಖಡ್ಗದ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದಿರುವರಂತೆ.

ಅನಂತಪುರ ಜಿಲ್ಲೆಗೆ ಸೇರಿದ ಕಾಂಕನಪಲ್ಲಿ ಎಂಬ ಗ್ರಾಮದಲ್ಲಿ ಒಬ್ಬ ಒಕ್ಕಲಿಗನು ತನ್ನ ಹೊಲವನ್ನು ಹೂಳುತ್ತಿದ್ದಾಗ ಸುಮಾರು 20 ರತಿ (ಕ್ಯಾರಟ್) ಯ ದೊಡ್ಡ ವಜ್ರವೊಂದು ಸಿಕ್ಕಿತು. ತನ್ನ ಹಳ್ಳಿಯಲ್ಲಿ ಅದಕ್ಕೆ ಸರಿಯಾದ ಬೆಲೆ ಬರಲಿಲ್ಲವೆಂದು ಅವನು ಬೆಂಗಳಾಯಿಗೆ ಹೋಗಿ ಸುಮಾರು ಆರುವರೆ ಸಾವಿರಕ್ಕೆ ಮಾರಿದನಂತೆ ಅದನ್ನು ಕೊಂಡುಕೊಂಡ ವ್ಯಾಪಾರಿಯು ತಾನು ಕೊಟ್ಟ ಹಣಕ್ಕಿಂತ ಹತ್ತು ಪಾಲಿಷನ್ನು ಹಣವನ್ನು ಅದರಿಂದ ಸಂಪಾದಿಸಬಹುದೆಂದು ತಿಳಿದುತ್ತಾನೆ.

ಕೋಟಯಂ ತಾಲೂಕಿಗೆ (ಮಲಬಾರ್) ಸೇರಿದ ಕರಿಯತ್ತ್ ಅಂಚುಮೆ ಎಂಬ ಗ್ರಾಮದಲ್ಲಿ ಒಂದು ವಿಚಿತ್ರ ದೃಶ್ಯ ಗುಡುಗಿನಂತೆ ಒಂದು ಧ್ವನಿ ಕೇಳಿಸಿತು. ಗ್ರಾಮಸ್ಥರು ಹೊರಗೆ ಬಂದು ನೋಡುವಾಗ ಸಮೀಪದ ಒಂದು ಗುಡ್ಡದ ಮೇಲೆ ಹೊಗೆಯು ಹೋಡವು ಕಾಣಿಸಿತು. ಅದರಲ್ಲಿ ಬೆಂಕಿಯ ಕಿಡಿಗಳೂ ಕಾಣಿಸಿಕೊಂಡವು. ಅದರ ಸಮೀಪದಲ್ಲಿ ಕೆಲವು ಮರಗಳು ಮುಗುಚಿ ಬಿದ್ದವು. ಒಂದು ಅಗಾಧವಾದ ಭಾಗವು ಜರಿದು ಬಿತ್ತು. ಹತ್ತಿರದಲ್ಲಿದ್ದ ಒಂದು ನದಿಯ ನೀರು ಅನೇಕ ಅಡಿಗಳ ಎತ್ತರಕ್ಕೆ ಹಾರಿತು. ಬೆಟ್ಟದ ಮೇಲೆ ಸುಟ್ಟ ಹುಲ್ಲು ಈಗಲೂ ಕಾಣುತ್ತಿದೆಯಂತೆ.

ವಿದೇಶ.

ಇಟಲಿಯನವು ಅಬಸೀನಿಯದ ಎಡೋವ ಪಟ್ಟಣಕ್ಕೆ ಬಾಂಬುಗಳನ್ನು ಹಾಕುತ್ತಿರುವುದಲ್ಲದೆ ಸೈನ್ಯಗಳಿಂದಲೂ ಮುತ್ತುತ್ತಿರುವರೆಂದೂ, ತುಂಬಾ ನಷ್ಟ ಪ್ರಾಣಾಂಟಾಗಿದೆಯೆಂದೂ ತಾ. 3ರ ವರ್ತಮಾನ. ಯುದ್ಧ ಪ್ರಾರಂಭನೇ!

ಜನತಾಂಗಗಳ ಸಂಘದ ಆಧಿವೇಶನವು ಬರಖಾಸ್ತಾಗಿದೆ. ಆದರೆ ಅಗತ್ಯ ಬಿದ್ದಲ್ಲಿ 24 ತಾಸಿನೊಳಗೆ ಸೇರಬೇಕೆಂದೂ ನಿರ್ಧರಿಸಿದೆ.

ಆಫ್ರಿಕಾಕ್ಕೆ ಹೋಗಲು ಹಿಂದೂ ದೇಶದ ಸೈನ್ಯದವರು ತಯಾರಾಗಿರಬೇಕೆಂದು ಹಲವು ಮಿಲಿಟರಿ ಆಫೀಸರುಗಳಿಗೆ ಹುಕುಂ ಕೊಡಲಾಗಿದೆಯೆಂದು ಸುದ್ದಿ.

ಆಫ್ರಿಕದ ಸೈನಿಕರಿಗಾಗಿ ಮುಸಲೋನಿಯವರಿಗೆ ಯಥೇಷ್ಟ ನಿಂಬೆ ಹಣ್ಣು ಬೇಕಾಗಿದೆ. ಆದುದರಿಂದ ಇಟಲಿಯಲ್ಲಿ ನಿಂಬೆ ಹಣ್ಣಿನ ಬೆಲೆ ಶೇಕಡ 32ರಷ್ಟು ಹೆಚ್ಚಿದೆ.

ಬಿರುಗಾಳಿಯ ರಭಸದಿಂದ ಜಪಾನ್ ಪ್ರಾಂತ್ಯದಲ್ಲಿ 80 ಸಾವಿರ ಮನೆಗಳಿರುಳಿ 300 ಮುಂದಿ ಮೃತರಾಗಿದ್ದಾರೆ. 200 ಮಂದಿಗೆ ಗಾಯ. 190 ಸೇತುವೆಗಳು ಕುಸಿದು ಬಿದ್ದಿವೆ.

20 ಕೋಟಿ ವರ್ಷಗಳ ಹಿಂದೆ ಬದುಕಿ ಇರಬಹುದೆಂದೂ 20 ಅಡಿ ಇದ್ದಿರಬಹುದೆಂದೂ ಊಹಿಸಲಾದ ಒಂದು ದೊಡ್ಡ ಹಾವಿನ ತಲೆಬುರುಡೆಯು ಪ್ರಿಟೋರಿಯದಲ್ಲಿ ಸಿಕ್ಕಿದೆ.

ಶ್ರೀಕಾವೇರಿ ಸಂಕ್ರಮಣದ ಮೂಹೂರ್ತ ಪತ್ರಿ.

ಇದೇ ಅಕ್ಟೋಬರ್ ತಾರೀಕು 14ನೇ ಸೋಮವಾರ ದಿನ 12 ಗಂಟೆ ಸಮಯಕ್ಕೆ ಶುಕ್ಲನ ಕಾಲ ಹೊರೆಯಲ್ಲಿ ಅಕ್ಕಯ ಪಾತ್ರೆ ಮಡಗುವ ಶುಭ ಮೂಹೂರ್ತ.

ಇದೇ ದಿನ ಮಧ್ಯಾಹ್ನದ ಮೇಲೆ ಗಂಟೆ 4ಕ್ಕೆ ಗುರುವಿನ ಕಾಲ ಹೊರೆಯಲ್ಲಿ ದೇವರ ಭಂಡಾರದ ಕಾಣಿಕೆ ಡಬ್ಬಿ ಮಡಗುವುದಕ್ಕೆ ಶುಭ ಮೂಹೂರ್ತ.

ಇದೇ ಅಕ್ಟೋಬರ್ ತಾರೀಕು 17ನೇ ಗುರುವಾರ ಮೃಗಶಿರಾ ನಕ್ಷತ್ರದಲ್ಲಿ (ಮಧ್ಯಾಹ್ನದ ಮೇಲೆ) ಸಾಯಂಕಾಲ 5 ಗಂಟೆ 1½ ನಿಮಿಷಕ್ಕೆ ಸರಿಯಾಗಿ ತುಲಾ ಕಾವೇರಿ ಸಂಕ್ರಮಣದ ತೀರ್ಥೋದ್ಭವದ ಪುಣ್ಯಕಾಲದ ಶುಭ ಮೂಹೂರ್ತ.

ಕೆ. ಚಂಗಪ್ಪ.
ಮುಜರಾಯಿ ಇಲಾಖೆ. (ಪ್ರೆಸಿಡೆಂಟ್)

Wanted.

Candidates for Telegraph and Station Master class. Allowance Rs 28. Uniform, passage and quarter free. Service essential. Rules and Entrance form on annas eight.

